# ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ



ಆಶಿಷ್ ರಾಯ್‌ಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2023

**ಸಂಪರ್ಕ ಮಾಹಿತಿ**

All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bengaluru 560 043
Karnataka, INDIA

ದೂರವಾಣಿ: +91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು ಜೆ.ವಿ, ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ (BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ''ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ'' ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್‌ಗಳು**

**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books |
**ಚರ್ಚ್ ಆಪ್:** apcwo.org/app
**ಸತ್ಯವೇದ ಕಾಲೇಜು:** apcbiblecollege.org | **ಇ-ಕಲಿಕೆ:** apcbiblecollege.org/elearn
**ಸಲಹಾ ಸೇವೆ:** chrysalislife.org | **ಸಂಗೀತ:** apcmusic.org
**ಸೇವಕರುಗಳ ಅನ್ಯೋನ್ಯತೆ:** pamfi.org | **ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada - Baptism in the Holy Spirit)

# ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ

# ಪರಿವಿಡಿ


ಪರಿಚಯ

1. ಆತನು ನಿಮ್ಮನ್ನು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಮಾಡಿಸುತ್ತಾನೆ 1

2. ಅಪೊಸ್ತಲರ ಕೃತ್ಯದಲ್ಲಿರುವ ದಾಖಲೆ 4

3. ಸಾಮಾನ್ಯ ಪ್ರಶ್ನೆಗಳು 15

4. ಸಲಹೆಗಳು ಮತ್ತು ಸ್ವೀಕರಿಸಲು ಪ್ರಾರ್ಥನೆ 25

5. ತುಂಬಿದೆ, ಅಭಿಷೇಕಿಸಲ್ಪಟ್ಟಿದೆ ಮತ್ತು ಆತ್ಮದಲ್ಲಿ ನಡೆಯುವುದು 31

# ಪರಿಚಯ

ಈ ಒಂದು ಪುಸ್ತಕವು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಪಡೆಯಬೇಕು ಮತ್ತು ಅನುಭವಿಸಬೇಕೆಂಬುದರ ಕುರಿತು ಸಹಾಯ ಮಾಡಲು ಉದ್ದೇಶಿಸಲ್ಪಟ್ಟಿದೆ. ಇದರಲ್ಲಿ ನಿಮ್ಮ ನಂಬಿಕೆಯನ್ನು ಕಟ್ಟಲು ಸಹಾಯ ಮಾಡಲು ಮತ್ತು ನಿಮಗೆ ಇರುವಂತಹ ಪ್ರಶ್ನೆಗಳನ್ನು ಸೂಕ್ತವಾಗಿ ಪರಿಹರಿಸಲು ಇಂತಹ ವಿಷಯಗಳ ಮೇಲೆ ನಾವು ಸಂಪೂರ್ಣ ಅಧ್ಯಯನ ಮಾಡಬಹುದು. ನೀವು ಶ್ರದ್ಧೆಯಿಂದ ವಿಷಯಗಳನ್ನು ಪುನಃ ಅವಲೋಕನ ಮಾಡುವಾಗ ನಂತರ ಪ್ರಾರ್ಥನೆಯಲ್ಲಿ ನಂಬಿಕೆಯಿಂದ ದೃಢವಾದ ಹೆಜ್ಜೆಯನ್ನಿಡುವಾಗ ನೀವು ಸಹ ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದಿಕೊಳ್ಳುವಿರಿ ಎಂಬುದಾಗಿ ನಾವು ನಂಬುತ್ತೇವೆ.

ಯೇಸು ಕ್ರಿಸ್ತನಿಗಾಗಿ ಸಾಕ್ಷಿಯಾಗಿರಲು ಬಲವನ್ನು ಪಡೆದುಕೊಳ್ಳಲು ಪವಿತ್ರಾತ್ಮನೊಡನೆ ದೀಕ್ಷಾಸ್ನಾನ ಹೊಂದಿಕೊಳ್ಳುವುದು ಉದ್ದೇಶವಾಗಿದೆ. ನಾವು ಬಲದೊಡನೆ ಸಾಕ್ಷಿಗಳಾಗಿರುತ್ತೇವೆ. ಪ್ರತಿಯೊಬ್ಬ ವಿಶ್ವಾಸಿಗಳ ಮೂಲಕವಾಗಿ ಸ್ವಸ್ಥತೆಗಳು, ಬಿಡುಗಡೆಗಳು, ಅದ್ಭುತಗಳು, ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳು ಬಿಡುಗಡೆಗೊಳ್ಳಲು ಈ ಪುಸ್ತಕವು ಪವಿತ್ರಾತ್ಮನಿಂದ ದೀಕ್ಷಾಸ್ನಾನವನ್ನು ನೀವು ಪಡೆದುಕೊಳ್ಳಲು ಸಹಾಯ ಮಾಡುತ್ತದೆ. ಆದ್ದರಿಂದ ನೀವು ಸಹ ಬಲದೊಡನೆ ಯೇಸುಕ್ರಿಸ್ತನಿಗಾಗಿ ಸಾಕ್ಷಿಗಳಾಗಬಹುದು ಇದು ಒಂದು ಉತ್ತೇಜಕ ಪ್ರಯಾಣದ ಪ್ರಾರಂಭವಾಗಿದೆ.

ವಿಶ್ವಾಸಿಗಳ ಜೀವಿತಗಳಲ್ಲಿ ಪವಿತ್ರಾತ್ಮನ ಕಾರ್ಯಗಳು ಮತ್ತು ಸೇವೆಯ ಮೇಲೆ ಸತ್ಯವನ್ನು ಕಂಡುಹಿಡಿಯಲೂ ನಮ್ಮ ಎರಡು ಪುಸ್ತಕಗಳಾದ– ''**ಆತ್ಮನ ವರಗಳು**'' ಮತ್ತು ''**ಅನ್ಯಭಾಷೆಯಲ್ಲಿ ಮಾತಾಡುವುದರಲ್ಲಿ ಇರುವ ಅತ್ಯದ್ಭುತಕರ ಪ್ರಯೋಜನಗಳು**'' ಎಂಬ ಪುಸ್ತಕಗಳನ್ನು ಇತರ ಜೊತೆ ಪುಸ್ತಕಗಳಾಗಿ ಓದಬೇಕೆಂಬುದಾಗಿ ನಾವು ಪ್ರೋತ್ಸಾಹಿಸುತ್ತೇವೆ. ಈ ಎರಡೂ ಪುಸ್ತಕಗಳು ಆಲ್ ಪೀಪಲ್ಸ್ ಸಭೆಯ ಉಚಿತ ಪ್ರಕಾಶನಗಳಲ್ಲಿ ದೊರೆಯುತ್ತವೆ.

ನಾನು 13 ವರ್ಷದವನಾಗುವ ಮೊದಲು ದೇವರು ನನ್ನ ಜೀವಿತವನ್ನು ಸುಂದರವಾಗಿ ಮುಟ್ಟಿದರು ಮತ್ತು ಯೇಸುಕ್ರಿಸ್ತನನ್ನು ನನ್ನ ಕರ್ತನು ಮತ್ತು ರಕ್ಷಕನು ಎಂಬುದಾಗಿ ತಿಳಿಯುವ ಹಂತಕ್ಕೆ ದೇವರು ಕರೆತಂದರು. ಮುಂದಿನ ವರ್ಷದ ಅವಧಿಯಲ್ಲಿ ಪವಿತ್ರಾತ್ಮನಲ್ಲಿ ನಾನು ದೀಕ್ಷಾಸ್ನಾನ ಪಡೆದುಕೊಂಡೆನು

ಮತ್ತು ಅನ್ಯಭಾಷೆಗಳೊಡನೆ ಮಾತಾಡಲೂ ಪ್ರಾರಂಭಿಸಿದೆನು ಮತ್ತು ಅಂದಿನಿಂದಲೂ ನಾನು ಮಾತಾನಾಡುತ್ತಿದ್ದೇನೆ. ನನ್ನ ಸ್ನೇಹಿತರೊಡನೆ ಪವಿತ್ರಾತ್ಮನ ದೀಕ್ಷಾಸ್ನಾನದ ಕುರಿತು ಮತ್ತು ಕರ್ತನಾದ ಯೇಸುವಿನ ಕುರಿತು ಮಾತಾನಾಡಲು ಪ್ರಾರಂಭಿಸಿದೆನು. ಮತ್ತು ನಾವೆಲ್ಲರೂ ಹದಿಹರೆಯದವರಾಗಿದ್ದೆವು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿಕೊಂಡೆವು ಮತ್ತು ಅನೇಕರು ರಕ್ಷಣೆ ಹೊಂದಿದರು. ಆ ಸಮಯದಿಂದ ಅನೇಕರು ರಕ್ಷಣೆ ಹೊಂದಿದರು. ಆ ಸಮಯದಿಂದ ಅನೇಕರು ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಪಡೆದುಕೊಳ್ಳುವುದನ್ನು ನೋಡುವುದರಲ್ಲಿ ನಾನು ಸಂತೋಷವನ್ನು ಹೊಂದಿದ್ದೇನೆ. ನೀವು ಸಹ ಇದನ್ನೇ ಮಾಡಬಹುದು. ಇತರೆ ವಿಶ್ವಾಸಿಗಳೊಂದಿಗೆ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿಕೊಳ್ಳುವುದರ ಕುರಿತು ಮತ್ತು ಯೇಸುಕ್ರಿಸ್ತನಿಗಾಗಿ ಅವರು ಸಾಕ್ಷಿಗಳಾಗಿರಲು ಇಂತಹ ಅದ್ಭುತಕರವಾದ ಬಲವನ್ನು ಅವರು ಪಡೆದುಕೊಳ್ಳಲು ಮುನ್ನಡೆಸಲು ಈ ಪುಸ್ತಕವನ್ನು ನೀವು ಉಪಯೋಗಿಸಬಹುದು.

ಆಶೀರ್ವಾದಗಳೊಂದಿಗೆ!
ಆಶಿಷ್ ರಾಯಚೂರ್

# 1

# ಆತನು ನಿಮ್ಮನ್ನು ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಮಾಡಿಸುತ್ತಾನೆ

ಸ್ನಾನಿಕನಾದ ಯೋಹಾನನು ಯೇಸುವಿನ ಸೇವೆಯನ್ನು ಪರಿಚಯಿಸುವಾಗ, ಕರ್ತನಾದ ಯೇಸುವು ಪವಿತ್ರಾತ್ಮದೊಡನೆ ಮತ್ತು ಬೆಂಕಿಯೊಡನೆ ಜನರಿಗೆ ದೀಕ್ಷಾಸ್ನಾನ ಮಾಡಿಸುತ್ತಾನೆಂಬುದಾಗಿ ಅವನು ಸಾರಿ ಹೇಳಿದನು.

**ಮತ್ತಾಯ 3:11,12**

**[11] ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು ಆತನ ಕೆರಗಳನ್ನು ಹೊರಸಲಿಕ್ಕೂ ನಾನು ಯೋಗ್ಯನಲ್ಲ ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು**
**[12] ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ. ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು ಎಂದು ಹೇಳಿದನು.**

''ಜೊತೆ'' ಅಥವಾ ''ದೊಡನೆ'' ಎಂಬ ಪದಕ್ಕೆ ಗ್ರೀಕ್‌ನಲ್ಲಿ ''ಎನ್'' ಎಂಬ ಒಂದು ಪ್ರಾಥಮಿಕ ಪೂರ್ವ ಪ್ರತ್ಯಯವು ''ಒಳಗೆ,'' ''ರಿಂದ,'' ''ದೊಡನೆ,'' ''ಇಂದ,'' ''ಗಾಗಿ,'' ಎಂಬುದಾಗಿ ಭಾಷಾಂತರಿಸಲ್ಪಟ್ಟಿರುವುದನ್ನು ದಯವಿಟ್ಟು ಗಮನಿಸಿರಿ. ಆದ್ದರಿಂದ ನಾವು ''**ಪವಿತ್ರಾತ್ಮದೊಡನೆ ದೀಕ್ಷಾಸ್ನಾನ**'' ಮತ್ತು ''**ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ**'' ಎಂಬ ಪದವನ್ನು ವಿನಿಮಯವಾಗಿ ನಾವು ಉಪಯೋಗಿಸಿದ್ದೇವೆ.

ಕರ್ತನಾದ ಯೇಸುವು ಪವಿತ್ರಾತ್ಮದೊಡನೆ ಮತ್ತು ಬೆಂಕಿಯೊಡನೆ ದೀಕ್ಷಾಸ್ನಾನ ಮಾಡಿಸುತ್ತಾನೆಂಬುದಾಗಿ ಸ್ನಾನಿಕನಾದ ಯೋಹಾನನು ಘೋಷಿಸಿದನು. ಯೋಹಾನನು ವ್ಯಾಖ್ಯಾನಿಸಿದಂತಹ ''ಬೆಂಕಿ''ಯು ''ಹೊಟ್ಟನ್ನು ಸುಟ್ಟು ಬಿಡುವುದು'' ಆಗಿದೆ. ಅದೈವಿಕವಾದದ್ದನ್ನು (ಕೀರ್ತನೆಗಳು 1:4, ಕೀರ್ತನೆಗಳು 35:5) ಮತ್ತು ಶಾರೀರಿಕವಾದಂತದ್ದನ್ನು (ಯೆರೆಮೀಯಾ 23:28). ಪ್ರತಿನಿಧಿಸಲು ಹೊಟ್ಟು ಎಂಬುದು ಉಪಯೋಗಿಸಲ್ಪಟ್ಟಿದೆ. ವಿಶ್ವಾಸಿಗಳ ಜೀವಿತದಲ್ಲಿ ಬೆಂಕಿಯ

ಹೊಟ್ಟನ್ನು ಸುಟ್ಟು ಹಾಕುತ್ತದೆ. ದೇವರಲ್ಲದ್ದನ್ನು ಮತ್ತು ಅದೈವಿಕವಾಗಿರುವುದನ್ನು ಸುಟ್ಟುಹಾಕುತ್ತದೆ. ಆದೈವಿಕವಾದುದರ ನಿತ್ಯತ್ವದ ನ್ಯಾಯದಂಡನೆ, ಅಂತ್ಯದ ಕುರಿತು ಸ್ನಾನಿಕನಾದ ಯೋಹಾನನು ವ್ಯಾಖ್ಯಾನಿಸುವುದನ್ನು ಸಹ ನೋಡುತ್ತೇವೆ. (ಪ್ರಕಟನೆ 20:10,15). ಆದ್ದರಿಂದ, ''*ಬೆಂಕಿ*'' ವಿಶ್ವಾಸಿಗಳ ಜೀವಿತದಲ್ಲಿ ಶುದ್ಧಿಕರಿಸುವ ಕಾರ್ಯ ಮತ್ತು ಅದೈವಿಕವಾದುದರ ನಿತ್ಯತ್ವದ ನ್ಯಾಯ ದಂಡನೆಯ ಎರಡು ಉಲ್ಲೇಖಗಳನ್ನು ಹೊಂದಿದೆ.

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸುವುದರ ಕುರಿತು, ಕರ್ತನಾದ ಯೇಸುವಿನ ಭೂಲೋಕದ ಸೇವೆಯ ಅವಧಿಯಲ್ಲಿ ಪವಿತ್ರಾತ್ಮನ ಬಲದಿಂದ ಆತನು ಸೇವೆ ಸಲ್ಲಿಸಿದನೆಂಬುದು ನಮಗೆ ಈಗ ತಿಳಿದದೆ (ಲೂಕ 4:14,18,19; ಮತ್ತಾಯ 12:28; ಅಪೊಸ್ತಲರ ಕೃತ್ಯಗಳು 10:38). ಆತನು ಪವಿತ್ರಾತ್ಮನ ಕುರಿತು ಬೋಧಿಸಿದನು ಮತ್ತು ಆತನು ಮಾಡಿದಂತಹ ಅದೇ ಕಾರ್ಯಗಳನ್ನು ವಿಶ್ವಾಸಿಗಳು ಮಾಡಲು ಅಧಿಕಾರ ಕೊಡಲು ''*ತಂದೆಯ ವಾಗ್ದಾನವನ್ನು*'' ಕಳುಹಿಸುತ್ತೇನೆ ಎಂಬುದಾಗಿ ಆತನು ವಾಗ್ದಾನ ಮಾಡಿದ್ದಾನೆ (ಯೋಹಾನ 14:12,26; ಯೋಹಾನ 15:26; ಯೋಹಾನ 16:7-13). ಆದಾಗ್ಯೂ, ಆತನ ಭೂಲೋಕದ ಸೇವೆಯ ಅವಧಿಯಲ್ಲಿ ಆತನು ಪವಿತ್ರಾತ್ಮದೊಡನೆ ಯಾರಿಗೂ ದೀಕ್ಷಾಸ್ನಾನ ಮಾಡಿಸದೇ ಇರುವುದನ್ನು ನಾವು ನೋಡುತ್ತೇವೆ.

ಆತನ ಪುನರುತ್ಥಾನದ ನಂತರ, ಆತನು ಶಿಷ್ಯರನ್ನು ಸಂಧಿಸಿದನು ಮತ್ತು ಪವಿತ್ರಾತ್ಮನನ್ನು ಪಡೆದುಕೊಳ್ಳುವುದಕ್ಕೆ ಅವರ ಮೇಲೆ ಉಸಿರಿಸಿದನು.

**ಯೋಹಾನ 20:21,22**
**21 ಯೇಸು ಅವರಿಗೆ ನಿಮಗೆ ಸಮಾಧಾನವಾಗಲಿ ಎಂದು ತಿರಿಗಿ ಹೇಳಿ ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿ ಕೊಡುತ್ತೇನೆ ಅಂದನು.**
**22 ಇದನ್ನು ಹೇಳಿ ಅವರ ಮೇಲೆ ಊದಿ ಅವರಿಗೆ – ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ**

ಶಿಷ್ಯರು ತಿರುಗಿ ಜನಿಸಿದ್ದಂತಹ ಸಮಯ ಇದಾಗಿದೆ. ದೇವರು ಊದಿದಾಗ, ಆತನ ಜೀವಿತದ ಪಾಲು ಕೊಟ್ಟನು. ಮನುಷ್ಯನಿಗೆ ಸ್ವಂತಃವಾದುದ್ದನ್ನು ಕೊಟ್ಟಾಗ ನಾವು ಇದನ್ನು ಹೇಳಬಹುದು (ಆದಿಕಾಂಡ 2:7). ಆದ್ದರಿಂದ, ಈ ನಿದರ್ಶನದಲ್ಲಿ ಅವರು ಆತ್ಮದಲ್ಲಿ ಜನಿಸಿದರು. ಅವರ ಆತ್ಮಗಳು ಹೊಸ ಜೀವಿತ ಪಡೆದುಕೊಂಡವು ಮತ್ತು ಅವರು ನೂತನವಾಗಿ ಸೃಷ್ಟಿಯಾದ ಜನರಾದರು.

ತಂದೆಯಾದ ದೇವರು ಆತನನ್ನು ಕಳುಹಿಸಿಕೊಟ್ಟಂತೆ ಕರ್ತನಾದ ಯೇಸುವು ಆತನ ಶಿಷ್ಯರಿಗೆ ಆದೇಶಾಧಿಕಾರ ಕೊಟ್ಟಾಗಲೂ ಮತ್ತು ಅವರು ತಿರುಗಿ ಹೊಸದಾಗಿ ಹುಟ್ಟಿದಾಗಲೂ, ಮೇಲಿನಿಂದ ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಹೊಂದಿ ಬಲವನ್ನು ಪಡೆದುಕೊಳ್ಳಲು ಅವರು ಯೆರೂಸಲೇಮಿನಲ್ಲಿ ಕಾದುಕೊಂಡಿರಬೇಕೆಂದು ಕರ್ತನಾದ ಯೇಸು ಸೂಚಿಸಿದ್ದನು.

**ಲೂಕನು 24:48,49**

**48 ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ**

**49 ಇಗೋ ನನ್ನ ತಂದೆಯ ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದು ಕೊಂಡಿರ್ರಿ ಎಂದು ಹೇಳಿದನು.**

**ಅಪೊಸ್ತಲರ ಕೃತ್ಯಗಳು 1:4,5,8**

**4 ಹೀಗಿರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ**

**5 ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆ ಕೊಟ್ಟನು**

**8 ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು.''**

''ದೀಕ್ಷಾಸ್ನಾನ'' ಎಂಬ ಪದವು ''ಮುಳುಗಿಸು, ಇಳಿಸು, ಅದ್ದು, ಮುಳುಗುತ್ತದೆ'' ಎಂಬ ಅರ್ಥ ಹೊಂದಿದೆ. ಇದು ಸಂಪೂರ್ಣವಾಗಿ ಆವರಿಸಿರುವ, ಸುತ್ತುವರೆದಿದೆ ಮತ್ತು ಮುಳುಗುವುದು ಎಂಬ ವಿಚಾರ ಹೊಂದಿದೆ.

ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಹೊಂದುವುದರ ಉದ್ದೇಶವು ವಿಶ್ವಾಸಿಗಳು ದೇವರ ಬಲದೊಡನೆ ಹೊದಿಸಿಸಲ್ಪಡುವದಾಗಿದೆ. ಆದ್ದರಿಂದ ಅವರು ಲೋಕದ ಕಟ್ಟಕಡೆಯವರೆಗೂ ಯೇಸುಕ್ರಿಸ್ತನಿಗಾಗಿ ಸಾಕ್ಷಿಗಳಾಗಿರುತ್ತಾರೆ.

# 2
# ಅಪೊಸ್ತಲರ ಕೃತ್ಯದಲ್ಲಿರುವ ದಾಖಲೆ

ಪವಿತ್ರಾತ್ಮನ ದೀಕ್ಷಾಸ್ನಾನ ಪಡೆದುಕೊಂಡಂತಹ ಜನರ ಗುಂಪುಗಳ ಅಥವಾ ವಯಕ್ತಿಕ ವ್ಯಕ್ತಿಗಳ ಐದು ದಾಖಲಿತ ಉದಾಹರಣೆಗಳು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಾವು ವಿವರವಾಗಿ ಅವಲೋಕಿಸೋಣ. ಇನ್ನು ಅನೇಕ ಉದಾಹರಣೆ ಇದ್ದಿರಬಹುದೆಂದು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಇವುಗಳು ನಿರ್ದಿಷ್ಟವಾಗಿ ನಾವು ಕಲಿಯಲು ಮತ್ತು ಉಪದೇಶಿಸಲು ದಾಖಲಿಸಲ್ಪಟ್ಟಿವೆ.

ಪವಿತ್ರಾತ್ಮನು ನಮಗಾಗಿ ದಾಖಲಿಸಲ್ಪಟ್ಟಂತಹವುಗಳನ್ನು ವಿಮರ್ಶಿಸೋಣ ಮತ್ತು ಅವುಗಳ ದೃಷ್ಟಿಕೋನಗಳನ್ನು ಕಲಿಯೋಣ.

## 1) ಪಂಚಾಶತ್ತಮ ದಿನ

**ಅಪೊಸ್ತಲರ ಕೃತ್ಯಗಳು 2:1-4**

**1 ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕ ಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು.**

**2 ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು.**

**3 ಅದಲ್ಲದೆ ಉರಿಯುಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು.**

**4 ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು.**

ಪಂಚಾಶತ್ತಮ ದಿನದಂದು 120 ಮಂದಿ ಶಿಷ್ಯರುಗಳು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದಿದಾಗ ಅಸಾಮಾನ್ಯವಾದಂತಹವುಗಳು ಜರುಗಿದವು; ಬಿರುಗಾಳಿ ಬೀಸುತ್ತದೋ ಎಂಬಂತೆ ಪರಲೋಕದಿಂದ ಒಂದು ದೊಡ್ಡ ಶಬ್ದ, ಎಲ್ಲರ ಮೇಲೆ ಉರಿಯಂತಿದ್ದ ನಾಲಿಗೆಗಳು ಅವರೆಲ್ಲರ ಮೇಲೆ ಬಂದವು ಮತ್ತು ಬೇರೆ ಬೇರೆ ಭಾಷೆಗಳಿಂದ ಮಾತಾನಾಡಿದರು.

ಕೆಲವು ಇತರೆ ವಿಷಯಗಳನ್ನು ಇಲ್ಲಿ ಗಮನಿಸಿರಿ ...

- ಅವರು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದಿದಾಗ (ಅಪೊಲಸ್ತಲರ ಕೃತ್ಯಗಳು 1:5) ಅವರು ''ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರು'' (ಅಪೊಸ್ತಲರ ಕೃತ್ಯಗಳು 2:4). ಅವರು ಪವಿತ್ರಾತ್ಮನಿಂದ ಹೊದಿಸಲ್ಪಡುವದು ಮತ್ತು ತುಂಬಿಸಲ್ಪಡುವುದು ಈ ಎರಡನ್ನೂ ಹೊಂದಿಕೊಂಡರು.
- ಅವರು ಇತರೆ ಅನ್ಯಭಾಷೆಯಲ್ಲಿ ಮಾತಾನಾಡಿದ್ದನ್ನು ಗಮನಿಸಿರಿ ಅವರ ಸ್ವಂತ ಗಾಯನ ಅಂಗಗಳ ಮೂಲಕವಾಗಿ ಅವರ ಸ್ವಂತ ಸ್ವರಾಂಗಗಳ ಬರುವುದು. ಇದರ ಅರ್ಥವಾಗಿತ್ತು ಅವರು ಮಾತಾನಾಡಿದರು, ಪವಿತ್ರಾತ್ಮನು ಮಾತಾನಾಡಲಿಲ್ಲ.ಭಾಷೆಯು ಮಾತ್ರ ಆತ್ಮನಿಂದ ಅವರಿಗೆ ಕೊಡಲ್ಪಟ್ಟಿತ್ತು.

ಇದು ಸುಗ್ಗಿಯ ಹಬ್ಬವಾಗಿತ್ತು. ಪ್ರಥಮ ಫಲಗಳ ಹಬ್ಬದ ತರುವಾಯ 50ನೇ ದಿನದಲ್ಲಿ ಪಂಚಾಶತ್ತಮ ಹಬ್ಬವು ಬರುತ್ತದೆ. ಈ ಹಬ್ಬವನ್ನು ಆಚರಿಸಲು ಬಂದಿದ್ದಂತಹ ಜನರ ಗುಂಪುಗಳಿಂದ ಯೆರುಸಲೇಮ್ ತುಂಬಲ್ಪಟ್ಟಿತು. ಮೇಲಂತಸ್ತಿನಲ್ಲಿ ಜರಗುತ್ತಿದ್ದನ್ನು ಕೇಳಿದಂತಹ ಜನರುಗಳು ವಿಭಿನ್ನವಾದ ಪ್ರತಿಕ್ರಿಯೆ ಹೊಂದಿದ್ದರು. ಕೆಲವರು ಸಂಪೂರ್ಣವಾಗಿ ಗಲಿಬಿಲಿಗೊಂಡರು. ಕೆಲವರು ಆಶ್ಚರ್ಯಚಕಿತರಾದರು ಮತ್ತು ಕೌತುಕಗೊಂಡರು ಕೆಲವರು ಆಶ್ಚರ್ಯಗೊಂಡು ಗೊಂದಲಕ್ಕೊಳಗಾದರು. ಇತರರು ಅಪಹಾಸ್ಯ ಮಾಡಿದರು ಮತ್ತು ಶಿಷ್ಯರು ಪಾನಮತ್ತರಾಗಿದ್ದಾರೆಂದು ಹೇಳಿದರು.

**ಅಪೊಸ್ತಲರ ಕೃತ್ಯಗಳು 2:14-18**

**14 ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ ಮಾಡಿದನು. ಯೆಹೂದ್ಯರೇ, ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಜನರೇ ಈ ಸಂಗತಿಯು ಏನೆಂದು ನಿಮಗೆ ಗೊತ್ತಾಗುವ ಹಾಗೆ ನನ್ನ ಮಾತಿಗೆ ಕಿವಿಗೊಡಿರಿ.**
**15 ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ ಈಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿದೆಯಷ್ಟೆ**
**16 ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ ಅದೇನಂದರೆ –**
**17 ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು**
**18 ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು; ಅವರೂ ಪ್ರವಾದಿಸುವರು.**

ಅಪೊಸ್ತಲನಾದ ಪೌಲನು ಪವಿತ್ರಾತ್ಮಭರಿತನಾಗಿ ಹಳೇ ಒಡಂಬಡಿಕೆಯಲ್ಲಿನ ಯೋವೇಲನ ಪ್ರವಾದನಾ ಪುಸ್ತಕದಿಂದ ಉಲ್ಲೇಖಗಳನ್ನು ನೀಡುತ್ತಾನೆ. (ಯೋವೇಲನು 2:28–32) ಮತ್ತು ಇಲ್ಲಿ ಜರುಗುತ್ತಿರುವಂತದ್ದು ಪ್ರವಾದನೆಯ ನೆರವೇರುವಿಕೆ ಎಂದು ವಿವರಿಸುತ್ತಾನೆ.

ಪಕ್ಕದ ಟಿಪ್ಪಣಿಯಲ್ಲಿ, ಯೋವೇಲನು **ಪ್ರವಾದನೆ, ದರ್ಶನಗಳು ಮತ್ತು ಕನಸುಗಳಿಂದ** ಕೂಡಿದಂತಹ ಆತ್ಮನ ಸುರಿಸುವಿಕೆಯನ್ನು ಮುನ್ಸೂಚನೆಯಾಗಿ ಹೇಳಿರುವುದನ್ನು ನಾವು ಗಮನಿಸುತ್ತೇವೆ. ಪಂಚಾಶತ್ತಮ ದಿನದಲ್ಲಿ ಇವುಗಳು ಯಾವುದು ಜರುಗಲಿಲ್ಲ, ಬದಲಿಗೆ, **ಅಲ್ಲಿ ಧ್ವನಿ, ಬೆಂಕಿ** ಮತ್ತು **ಅನ್ಯಭಾಷೆ** ಇತ್ತು. ಆದಾಗ್ಯೂ ''*ಇದು ಆಗಲೇ ಹೇಳಲ್ಪಟ್ಟಿತು*'' (ಅಪೊಸ್ತಲರ ಕೃತ್ಯಗಳು 2:16) ಅಥವಾ ನೆರವೇರಿದಂತಹ ಆ ಒಂದು ಸಂಗತಿ ಇದೇ ಅದು! ಎಂಬುದಾಗಿ ಪೇತ್ರನ ಮೂಲಕವಾಗಿ ಪವಿತ್ರಾತ್ಮನು ವ್ಯಾಖ್ಯಾನಿಸುತ್ತಾನೆ. ಪವಿತ್ರಾತ್ಮನು ಚಲಿಸುವಾಗ ತೋರ್ಪಡಿಸುವಿಕೆಗಳು ಯಾವಾಗಲೂ ಒಂದೇ ಸಮರೀತಿಯಲ್ಲಿ ಇರುವುದಿಲ್ಲ ಎಂಬ ಪಾಠ ಕಲಿಯಬಹುದು ಆದರೆ ಅದು ಇನ್ನೂ ಆತ್ಮನ ಸುರಿಸುವಿಕೆ ಎಂಬುದಾಗಿ ಕರೆಯಬಹುದು ಯಾಕೆಂದರೆ ಇದು ಅದೇ ಪವಿತ್ರಾತ್ಮನ ಕೆಲಸವಾಗಿದೆ!

ಆ ಒಂದು ದಿನದಲ್ಲಿ, ಪೇತ್ರನು ಸಂದೇಶವನ್ನು ಪ್ರಸಂಗಿಸಿದಾಗ 3000 ಜನರು ರಕ್ಷಿಸಲ್ಪಟ್ಟರು. ಅಭಿಷೇಕದ ಅಡಿಯಲ್ಲಿ ನಾವು ಪ್ರಸಂಗಿಸುವಾಗ ಅಂತಹ ಒಂದು ದೊಡ್ಡ ಆತ್ಮಗಳ ಸುಗ್ಗಿಯನ್ನು ಎದುರುನೋಡಬಹುದು! ಇದು ಮತ್ತೊಮ್ಮೆ ಮಗದೊಮ್ಮೆ ಸಂಭವಿಸಬಹುದು.

**ಅಪೊಸ್ತಲರ ಕೃತ್ಯಗಳು 2:38,39**

**38 ಪೇತ್ರನು ಅವರಿಗೆ ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ.**

**39 ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು.**

ಪಶ್ಚಾತ್ತಾಪದ ಆತನ ಕರೆಯ ಭಾಗವಾಗಿ ಅವರ ಪಾಪಗಳು ಕ್ಷಮಿಸಲ್ಪಡುವುದು ಮಾತ್ರವಲ್ಲದೇ ಅವರು ''ಪವಿತ್ರಾತ್ಮದ ವರಗಳನ್ನು ಪಡೆದುಕೊಳ್ಳಬಹುದು'' ಎಂಬುದಾಗಿ ಗುಂಪಿಗೆ ಪೇತ್ರನು ತಿಳಿಸುತ್ತಾನೆ. ಅವರು ಸಹ 120 ಶಿಷ್ಯರುಗಳು ಪಡೆದುಕೊಂಡಿದ್ದನ್ನು–ಒಂದು ವರವಾಗಿ ಅವರು

ಸಹ ಪಡೆದುಕೊಳ್ಳಬಹುದು ಪವಿತ್ರಾತ್ಮನ ಸುರಿಸುವಿಕೆಯು ನಮಗೆ ಒಂದು ವರವಾಗಿ ಕೊಡಲ್ಪಟ್ಟಿದೆ. ನಾವು ಮಾಡಬೇಕಾಗಿರುವುದೇನೆಂದರೆ ನಂಬಿಕೆಯಿಂದ ಸುಮ್ಮನೇ ಪಡೆದುಕೊಳ್ಳಬಹುದಾಗಿದೆ. ನಾವು ಪವಿತ್ರಾತ್ಮನ ವರವನ್ನು ಸಂಪಾದಿಸಿ ಕೊಳ್ಳಲಾಗುವುದಿಲ್ಲ.

ಪೇತ್ರನು ಉಲ್ಲೇಖಿಸುವಂತ ಮತ್ತೊಂದು ಸತ್ಯಾಂಶವೇನೆಂದರೆ ಈ ''ವಾಗ್ದಾನವು'' ಅಥವಾ ಸಂದೇಶವು ನಿಮ್ಮ ಮಕ್ಕಳಿಗೂ (ಸಂತತಿಗಳಾದ್ಯಂತ), ದೂರದಲ್ಲಿರುವ ಎಲ್ಲರಿಗೆ (ರಾಷ್ಟ್ರಗಳಾದ್ಯಂತ), ಮತ್ತು ನಮ್ಮ ಕರ್ತನಾದ ದೇವರು ಕರೆಯುವವರೆಲ್ಲರಿಗೂ (ಜನಾಂಗಗಳಾದ್ಯಂತ, ಸಮಯಗಳಾದ್ಯಂತ) ಇರುವಂತ್ತದಾಗಿದೆ.

ನಮ್ಮ ಕರ್ತನಾದ ದೇವರು ಕರೆಯುವವರೆಲ್ಲರಿಗೆ ಈ ವಾಗ್ದಾನವಿದೆ ಎಂದು ಪೇತ್ರನು ಹೇಳಿದನು. ದೇವರು ಇಂದು ಕೂಡ ಜನರನ್ನು ಕರೆಯುವವನಾಗಿರುವದರಿಂದ ಅಪೊಸ್ತಲ ಕೃತ್ಯಗಳು 2:38 ರಲ್ಲಿ ಹೇಳಲ್ಪಟ್ಟಿರುವಂತೆ ರಕ್ಷಣೆಯ ''ವಾಗ್ದಾನ'' ಮತ್ತು ಪವಿತ್ರಾತ್ಮನ ವರಗಳು ಇಂದಿಗೂ ಕೂಡ ನಮಗೆ ಲಭ್ಯವಿದೆ.

## 2) ಸಮಾರ್ಯದಲ್ಲಿನ ವಿಶ್ವಾಸಿಗಳು

ಅಪೊಸ್ತಲರ ಕೃತ್ಯಗಳು 8ನೇ ಅಧ್ಯಾಯದಲ್ಲಿ, ಹಿಂಸೆಯ ನಿಮಿತ್ತವಾಗಿ ಯೆರೂಸಲೇಮಿನಿಂದ ವಿಶ್ವಾಸಿಗಳು ಅನೇಕ ನೆರೆಹೊರೆಯ ಹಳ್ಳಿಗಳು, ನಗರಗಳು ಮತ್ತು ಪಟ್ಟಣಗಳಿಗೆ ಚದುರಿಸಲ್ಪಟ್ಟರು. ಯೆರೂಸಲೇಮಿನಲ್ಲಿನ ಸಭೆಯಲ್ಲಿ ಸೇವೆ ಸಲ್ಲಿಸುತ್ತಿದ್ದಂತ ಫಿಲಿಪ್ಪನು ಸಮಾರ್ಯ ಸಭೆಗೆ ಹೋದನು ಮತ್ತು ಅವರಿಗೆ ಕ್ರಿಸ್ತನ ಬಗ್ಗೆ ಪ್ರಸಂಗಿಸಿದನು. ಕರ್ತನಾದ ಯೇಸು ಕ್ರಿಸ್ತನಲ್ಲಿ ಅನೇಕರು ನಂಬಿದರು ಮಾಟ ಮಂತ್ರದ ಮೂಲಕವಾಗಿ ಅನೇಕ ಜನರನ್ನು ಹತೋಟಿಯಲ್ಲಿಟ್ಟುಕೊಂಡಿದ್ದ ಮಂತ್ರವಾದಿ ಎಂಬುದಾಗಿ ಕರೆಯಲ್ಪಟ್ಟಂತಹ ಸೀಮೋನನೆಂಬುವನು ನಂಬಿದನು ಇಂತಹ ಹೊಸ ವಿಶ್ವಾಸಿಗಳು ನೀರಿನಲ್ಲಿ ದೀಕ್ಷಾಸ್ನಾನ ಹೊಂದಿದರು.

**ಅಪೊಸ್ತಲರ ಕೃತ್ಯಗಳು 8:12-19**

**12 ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು**

**[13] ಆಗ ಸಿಮೋನನು ಕೂಡ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕಕಾರ್ಯಗಳೂ ಮಹತ್ಕಾರ್ಯಗಳೂ ಉಂಟಾಗುವದನ್ನು ನೋಡಿ ಬೆರಗಾದನು.**
**[14] ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ, ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು.**
**[15] ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮ ವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆ ಮಾಡಿದರು.**
**[16] ಯಾಕೆಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡರು.**
**[17] ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮವರವನ್ನು ಹೊಂದಿದ್ದರು**
**[18] ಅಪೊಸ್ತಲರು ಕೈಗಳನ್ನಿಡುವದರ ಮೂಲಕವಾಗಿ ಪವಿತ್ರಾತ್ಮದಾನವಾಗುವದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂದಿಟ್ಟು**
**[19] ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ ಅವರು ಪವಿತ್ರಾತ್ಮವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು.**

ಸಮಾರ್ಯದಲ್ಲಿನ ಜನರು ಕರ್ತನಾದ ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟಿದ್ದನ್ನು ಯೆರೂಸಲೇಮಿನಲ್ಲಿ ಅಪೊಸ್ತಲರು ಕೇಳಿದಾಗ ಅವರು ಮಾಡಿದ್ದೇನು ಎಂಬುದನ್ನು ನೋಡುವುದು ಆಸಕ್ತಿಕರವಾಗಿದೆ. ಪೇತ್ರ ಮತ್ತು ಯೋಹಾನರೂ, ನಿರ್ದಿಷ್ಟವಾಗಿ ಜನರು ಪವಿತ್ರಾತ್ಮನನ್ನು ಪಡೆದುಕೊಳ್ಳುವಂತೆ ಪ್ರಾರ್ಥಿಸಲು ಮುಂದೆ ಬಂದರು.

ಆದಿಸಭೆಯಲ್ಲಿ ಹೊಸ ವಿಶ್ವಾಸಿಗಳೂ ಪವಿತ್ರಾತ್ಮನನ್ನು ಪಡೆದುಕೊಳ್ಳಲು ಪ್ರಾರ್ಥಿಸುವಂತದ್ದು (ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ) ಒಂದು ''ಸಾಮಾನ್ಯ ರೂಢಿಯಾಗಿ'' ಕಂಡು ಬಂದಿದ್ದನ್ನು ನಿರ್ಣಯಿಸುವಂತದ್ದು ಸುರಕ್ಷಿತವಾದುದಾಗಿ ಕಂಡುಬರುವಂತ್ತದ್ದಾಗಿದೆ. ದೇವರು ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಸಮಾರ್ಯದಲ್ಲಿ ಹೊಸ ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿದಾಗ ಅತ್ಯದ್ಭುಕರವಾದಂತಹ ಸಂಗತಿಗಳು ಜರುಗಿದವೆಂಬುದನ್ನು ನಾವು ಊಹಿಸಿಕೊಳ್ಳಬಹುದು ಯಾಕೆಂದರೆ ಸೀಮೋನನು ಅಪ್ರಾಕೃತದ ಅಂಧಕಾರ ಭಾಗವಾದದರಲ್ಲಿ ತೊಡಗಿಸಿಕೊಂಡಿದ್ದನ್ನು ಈಗ ಅದೇ ಬಲವನ್ನು ಖರೀದಿಸಲು ಹಣವನ್ನು ಅವರಿಗೆ ನೀಡಲೂ ಮುಂದಾದುದ್ದನ್ನು ನೋಡುತ್ತಿದ್ದೇವೆ. ಪಂಚಾಶತ್ತಮ ದಿನದ ನಿದರ್ಶನದಲ್ಲಿ ಜರುಗಿದ್ದನ್ನು ಪ್ರಾಚೀನ ದಾಖಲೆಗಳಲ್ಲಿ ಸತ್ಯವೇದ ಪಠ್ಯದಲ್ಲಿ ಸ್ಪಷ್ಟವಾಗಿ ನಮೂದಿಸದಿದ್ದಾಗ್ಯೂ ಸಮರ್ಯದಲ್ಲಿನ ವಿಶ್ವಾಸಿಗಳು ಪವಿತ್ರಾತ್ಮನ ವರವನ್ನು ಪಡೆದುಕೊಂಡಾಗ ಅನ್ಯಭಾಷೆಗಳಲ್ಲಿ ಅವರು ಮಾತಾನಾಡಲೂ ಪ್ರಾರಂಭಿಸಿದರು ಎಂಬುದನ್ನು ನಾವು ಊಹಿಸಿಕೊಳ್ಳುವುದು ಸುರಕ್ಷಿತವಾದದ್ದಾಗಿದೆ.

ಹಿಂದಿನ ಒಬ್ಬ ಮಂತ್ರವಾದಿಯಾದಂತಹ ಸೀಮೋನನನ್ನು ಬೆಚ್ಚಿ ಬೀಳಿಸಿದಂತಹ ಅಪ್ರಾಕೃತ ವಿದ್ಯಮಾನ ಇದಾಗಿದೆ.

## 3) ಅಪೊಸ್ತಲನಾದ ಪೌಲನಾಗಿ ಕಂಡುಬಂದಂತಹ ಸೌಲನು

ಪವಿತ್ರಾತ್ಮನನ್ನು ಪಡೆದುಕೊಳ್ಳಲೂ ಪ್ರಾರ್ಥಿಸುವಾಗ ಮಹಾ ಅಪೊಸ್ತಲನಾದ ಪೌಲನಾಗಿ ಕಂಡುಬಂದಂತಹ ಸೌಲನು ಸಹ ಒಬ್ಬನಾಗಿ ಕಂಡುಬಂದದ್ದು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿನ ನಮ್ಮ ಮುಂದಿನ ದಾಖಲೆಯಾಗಿದೆ. ದಮಸ್ಕದ ದಾರಿಯಲ್ಲಿ ಸೌಲನು ಕರ್ತನಾದ ಯೇಸುವನ್ನು ಅತ್ಯದ್ಭುತಕರವಾಗಿ ಸಂಧಿಸಿದನು ಅವನು ಕುರುಡನಾದನು, ಮೂರು ದಿವಸಗಳು ಉಪವಾಸ ಪ್ರಾರ್ಥನೆ ಮತ್ತು ಕರ್ತನಾದ ಯೇಸುಕ್ರಿಸ್ತನಿಗಾಗಿ ಕಾದುಕೊಂಡಿರು ಅನನಿಯ, ಸೌಲನು ಕಣ್ಣಿನ ದೃಷ್ಟಿಯನ್ನು ಪಡೆದುಕೊಳ್ಳಲು ನೀನು ಹೋಗಿ ಪ್ರಾರ್ಥನೆ ಮಾಡು ಎಂಬುದಾಗಿ ಉಪದೇಶಿಸಿದನು.

**ಅಪೊಸ್ತಲರ ಕೃತ್ಯಗಳು 9:10-18**

**10 ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು ಕರ್ತನು ದರ್ಶನದಲ್ಲಿ ಅನನೀಯನೇ, ಎಂದು ಅವನನ್ನು ಕರೆಯಲು ಅವನು ಕರ್ತನೇ ಇಗೋ ಇದ್ದೇನೆ ಅಂದನು**

**11 ಕರ್ತನು ಅವನಿಗೆ - ನೀನೆದ್ದು ನೆಟ್ಟನೇ ಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬವನನ್ನು ವಿಚಾರಿಸು ಅವನು ಪ್ರಾರ್ಥನೆ ಮಾಡುತ್ತಾನೆ**

**12 ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣು ಕಾಣುವಂತೆ ತನ್ನ ಮೇಲೆ ಕೈಯಿಡುವುದನ್ನು ನೋಡಿದ್ದಾನೆ ಎಂದು ಹೇಳಿದನು.**

**13 ಅದಕ್ಕೆ ಅನನೀಯನು ಕರ್ತನೇ ಆ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನನ್ನು ನಂಬಿದ ದೇವಜನರಿಗೆ ಎಷ್ಟೋ ಕೇಡನ್ನುಂಟುಮಾಡಿದನೆಂದು ಅವನು ವಿಷಯವಾಗಿ ಅನೇಕರಿಂದ ಕೇಳಿದ್ದೇನೆ**

**14 ಮತ್ತು ಇಲ್ಲಿಯೂ ನಿನ್ನ ಹೆಸರನ್ನು ಸ್ಮರಿಸುವವರೆಲ್ಲರಿಗೆ ಬೇಡಿ ಹಾಕಿಸುವ ಅಧಿಕಾರವನ್ನು ಮಹಾಯಾಜಕರಿಂದ ಹೊಂದಿದ್ದಾನೆ ಅಂದನು**

**15 ಕರ್ತನು ಅವನಿಗೆ - ನೀನು ಹೋಗು ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗು ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ.**

**16 ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬುದನ್ನು ನಾನೇ ಅವನಿಗೆ ತೋರಿಸುವೆನು ಎಂದು ಹೇಳಿದನು.**

**17 ಆಗ ಅನನೀಯನು ಹೊರಟು ಆ ಮನೆಯೊಳಗೆ ಹೋಗಿ ಅವನ ಮೇಲೆ ತನ್ನ ಕೈಗಳನ್ನಿಟ್ಟು ಸಹೋದರನಾದ ಸೌಲನೇ, ನೀನು ಬಂದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸು ನಿನಗೆ ಕಣ್ಣು ಕಾಣುವಂತೆಯೂ ನೀನು ಪವಿತ್ರಾತ್ಮಭರಿತನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಿದನು.**

**[18] ಕೂಡಲೇ ಅವನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು. ಅವನು ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು ತರುವಾಯ ಊಟ ಮಾಡಿ ಬಲ ಹೊಂದಿದ್ದನು.**

ಅನನೀಯನು, ಆರಂಭಿಕ ಹಿಂಜರಿಕೆಯಿದ್ದರೂ, ಸೌಲನು ದೃಷ್ಟಿಯನ್ನು ಹೊಂದಿಕೊಳ್ಳಲೂ ಪ್ರಾರ್ಥಿಸುವುದು ಮಾತ್ರವಲ್ಲದೆ ಪವಿತ್ರಾತ್ಮದೊಡನೆ ತುಂಬಿಸಲ್ಪಡುವಂತೆ ಹೋಗಿ ಪ್ರಾರ್ಥಿಸಿದನು. ಸೌಲನು ಯೇಸುಕ್ರಿಸ್ತನಲ್ಲಿ ಒಬ್ಬ ವಿಶ್ವಾಸಿಯಾದನು. ಕರ್ತನಲ್ಲಿ ಮೂರು ದಿನಗಳು ಮಾತ್ರವಾಗಿತ್ತು. ಕರ್ತನಾದ ಯೇಸುವು ಅನನೀಯನಿಗೆ ಹೇಳಿದ್ದರಿಂದ ತನ್ನ ಜೀವಿತದಲ್ಲಿ ಸೌಲನು ಒಂದು ದೊಡ್ಡ ಕರೆಯನ್ನು ಹೊಂದಿದ್ದನೆಂಬುದನ್ನು ನಾವು ನೋಡಬಹುದು ಆದಾಗ್ಯೂ ಅವನು ಪವಿತ್ರಾತ್ಮನನ್ನು ಪಡೆದುಕೊಳ್ಳಲು ಅವನ ಮೇಲೆ ಪ್ರಾರ್ಥಿಸಲ್ಪಟ್ಟನು.

ಆದಿಸಭೆಯಲ್ಲಿ ಹೊಸ ವಿಶ್ವಾಸಿಗಳು ಪವಿತ್ರಾತ್ಮನನ್ನು ಪಡೆದು ಕೊಳ್ಳುವುದಕ್ಕಾಗಿ ಪ್ರಾರ್ಥಿಸುವಂತದ್ದು ಸರ್ವೆ ಸಾಮಾನ್ಯವಾದುದೆಂಬುದನ್ನು ಮತ್ತೊಮ್ಮೆ ನಮ್ಮ ತಿಳುವಳಿಕೆಗೆ ಸೇರಿಸುತ್ತದೆ.

ಅಪೊಸ್ತಲರ ಕೃತ್ಯಗಳು 9ನೇ ಅಧ್ಯಾಯದಲ್ಲಿ ಸೌಲನು ಅನ್ಯ ಭಾಷೆಯಲ್ಲಿ ಮಾತನಾಡಿದನು ಅಥವಾ ಯಾವುದೇ ಅತ್ಯದ್ಭುತಕರ ವಿಧ್ಯಮಾನವನ್ನು ತೋರಿಸಿದನೆಂಬುದರ ಕುರಿತು ಯಾವುದೇ ನಿರ್ದಿಷ್ಟ ಉಲ್ಲೇಖವಿಲ್ಲದಿದ್ದರು ಸೌಲನು (ನಂತರ ಪೌಲನು) ಬಹಳವಾಗಿ ಅನ್ಯಭಾಷೆಯಲ್ಲಿ ಪ್ರಾರ್ಥಿಸಿದನೆಂಬುದು ನಮಗೆ ಗೊತ್ತಿದೆ. ಕೊರಿಂಥದವರಿಗೆ ಅವನು ಹೀಗೆ ಬರೆದನು; ''*ನಾನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ವಾಣಿಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ*''(1 ಕೊರಿಂಥದವರಿಗೆ 14:18). ಪೌಲನು ಆತ್ಮನ ಎಲ್ಲಾ ವರಗಳಲ್ಲಿ ತೋರ್ಪಡಿಸಿಕೊಂಡನೆಂಬುದು ನಮಗೆ ತಿಳಿದದೆ ಮತ್ತು ಇವುಗಳ ಕುರಿತು ಇತರೆ ವಿಶ್ವಾಸಿಗಳಿಗೂ ಬೋಧಿಸಿದನು ಯಾಕೆಂದರೆ 1 ಕೊರಿಂಥದವರಿಗೆ 12-14 ಅಧ್ಯಾಯಗಳನ್ನು ಅವನೇ ಬರೆದವನಾಗಿದ್ದಾನೆ.

## 4) ಕೊರ್ನೇಲ್ಯನು ಮತ್ತು ಅವನ ಮನೆಯವರು

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿಕೊಂಡವರಲ್ಲಿ ಕೊರ್ನೇಲ್ಯನು ಮತ್ತು ಅವನ ಮನೆಯವರು ನಾಲ್ಕನೇಯ ದಾಖಲಾತಿಯಾಗಿದೆ. ಅಪೊಸ್ತಲನಾದ ಪೌಲನು ದೈವಿಕ ಪ್ರೇರಣೆ ಹೊಂದಿದವನಾಗಿ ಕೊರ್ನೇಲ್ಯನನ್ನು ಸಂಧಿಸಲು ಹೋದನು ಅಲ್ಲಿ ಯೇಸು ಕ್ರಿಸ್ತನ ಬಗ್ಗೆ ಅವನಿಗೆ ಪ್ರಸಂಗಿಸಿದನು. ಅನ್ಯಜನರಿಗೆ ಸುವಾರ್ತೆಯು ಮೊದಲ ಬಾರಿಗೆ ಸಾರಲ್ಪಟ್ಟಿದ್ದು ಇದಾಗಿದೆ.

**ಅಪೊಸ್ತಲರ ಕೃತ್ಯಗಳು 10:44-48**
**44 ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯವನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮವರವು ಇಳಿಯಿತು.**
**45-46 ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾಡುತ್ತಾ ಇರುವದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ ಅನ್ಯಜನಗಳಿಗೂ ಪವಿತ್ರಾತ್ಮ ದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು ನಡೆದ ಸಂಗತಿಯನ್ನು ಪೇತ್ರನು ನೋಡಿ**
**47 ನಮ್ಮ ಹಾಗೆಯೇ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ ಎಂದು ಹೇಳಿ**
**48 ಅವರಿಗೆ ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆಕೊಟ್ಟನು ಆ ಮೇಲೆ ಅವರು ಅವನನ್ನು ಇನ್ನೂ ಕೆಲವು ದಿವಸ ಇರಬೇಕೆಂದು ಬೇಡಿಕೊಂಡರು.**

ಪೇತ್ರನು ಅನ್ಯಜನರಿಗೆ ಕ್ರಿಸ್ತನ ಬಗ್ಗೆ ಸಾರಿದಾಗ, ಅವರು ಸಂದೇಶವನ್ನು ನಂಬಿದರು ಮತ್ತು ಅವರ ಮೇಲೆ ದೇವರು ತಕ್ಷಣವೇ ಆತನ ಆತ್ಮನನ್ನು ಸುರಿಸಿದನು. ಜನರು ಅನ್ಯಭಾಷೆಯಲ್ಲಿ ಮಾತನಾಡಿದರು ಮತ್ತು ದೇವರನ್ನು ವರ್ಣಿಸಿ ಕೊಂಡಾಡಿದರು.

**ಅಪೊಸ್ತಲರ ಕೃತ್ಯಗಳು 11:15-18**
**15 ನಾನು ಮಾತಾಡುವದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮ ವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು.**
**16 ಆಗ ಯೋಹಾನನಂತೂ ನೀರಿನ ದೀಕ್ಷಾಸ್ನಾನ ಮಾಡಿಸಿದನು ನಿಮಗಾದರೋ ಪವಿತ್ರಾತ್ಮನಲ್ಲಿ ಸ್ನಾನವಾಗುವದು ಎಂದು ಯೇಸುಸ್ವಾಮಿ ಹೇಳಿದ ಮಾತು ನನ್ನ ನೆನಪಿಗೆ ಬಂತು**
**17 ದೇವರು ಕರ್ತನಾಗಿರುವ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಮಗೆ ಕೊಟ್ಟ ವರಕ್ಕೆ ಸರಿಯಾದ ವರವನ್ನು ಅವರಿಗೂ ಕೊಟ್ಟಿರಲಾಗಿ ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ?**
**18 ಹೀಗೆಂದ ಮಾತುಗಳನ್ನು ಆ ಸುನ್ನತಿಯವರು ಕೇಳಿ ಆಕ್ಷೇಪಣೆ ಮಾಡುವುದನ್ನು ಬಿಟ್ಟು ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ. ಎಂದು ದೇವರನ್ನು ಕೊಂಡಾಡಿದರು.**

ಮತ್ತೆ ಹಿಂತಿರುಗಿ ಯೆರೂಸಲೇಮಿನಲ್ಲಿ, ಪೇತ್ರನು ಕೊರ್ನೇಲ್ಯನ ಮನೆಯಲ್ಲಿ ಜರುಗುತ್ತಿರುವದನ್ನು ಮರುಸೃಷ್ಟಿಕರಿಸಿದನು ಮತ್ತು ಪಂಚಾಶತ್ತಮ ದಿನದಲ್ಲಿ 120 ಶಿಷ್ಯರುಗಳು ಪವಿತ್ರಾತ್ಮನ ದೀಕ್ಷಾಸ್ನಾನ ಪಡೆದುಕೊಂಡಂತಹ ರೀತಿಯದ್ದು ಎಂಬುದಾಗಿ ಅವನು ಸ್ಪಷ್ಟವಾಗಿ ತಿಳಿಸುತ್ತಾನೆ.

ಜನರು ಕರ್ತನಾದ ಯೇಸುಕ್ರಿಸ್ತನನ್ನು ನಂಬಿದಾಗ, ಪಂಚಾಶತ್ತಮ ದಿನದಂತೆ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವನ್ನು ಅವರು ಪಡೆದುಕೊಂಡಂತಹ ಮತ್ತೊಂದು ದೃಷ್ಟಾಂತ ಇದೆ.

## 5) ಎಫೆಸದಲ್ಲಿನ ವಿಶ್ವಾಸಿಗಳು

ಜನರು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿಕೊಂಡಂತಹ ಕೊನೆಯ ಘಟನೆಯು ಅಪೊಸ್ತಲರ ಕೃತ್ಯಗಳು 19 ರಲ್ಲಿನ ಎಫೆಸದಲ್ಲಿನದು ಕೊನೆಯ ದಾಖಲೆಯಾಗಿದೆ. ಸ್ನಾನಿಕನಾದ ಯೋಹಾನನಿಂದ ನೀರಿನಲ್ಲಿ ದೀಕ್ಷಾಸ್ನಾನ ಪಡೆದುಕೊಂಡಿದಂತಹ ಕೆಲವು ಜನರನ್ನು ಅಪೊಸ್ತಲನಾದ ಪೌಲನು ಇಲ್ಲಿ ಸಂಧಿಸಿದನು. ಯೇಸುಕ್ರಿಸ್ತನ ಸೇವೆಯಂದಿನಿಂದಲೂ ಏನು ಜರುಗುತ್ತಿದೆಂಬುದರ ಬಗ್ಗೆ ಈ ಜನರಿಗೆ ತಿಳಿದಿರಲಿಲ್ಲ.

**ಅಪೊಸ್ತಲರ ಕೃತ್ಯಗಳು 19:1–7**

**1 ಅಪೊಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನು ಕಂಡು**

**2 ನೀವು ನಂಬಿದಾಗ ಪವಿತ್ರಾತ್ಮ ವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ ಇಲ್ಲ ಪವಿತ್ರಾತ್ಮ ವರವು ಉಂಟೆಂಬನ್ನೇ ನಾವು ಕೇಳಲಿಲ್ಲ ಅಂದರು**

**3 ಅವನು ನೀವು ಯಾವುದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು**

**4 ಅದಕ್ಕೆ ಪೌಲನು ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬುದಾಗಿ ಜನರಿಗೆ ಹೇಳಿದನು ಎಂದು ಹೇಳಲು**

**5 ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು.**

**6 ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು.**

**7 ಅವರು ಸುಮಾರು ಹನ್ನೆರಡು ಮಂದಿ ಗಂಡಸರು**

*''ನೀವು ನಂಬಿದಾಗ ಪವಿತ್ರಾತ್ಮ ವರವನ್ನು ಹೊಂದಿದ್ದಿರೋ?''* (ಅಪೊಸ್ತಲರ ಕೃತ್ಯಗಳು 19:2ಅ)ಎಂಬ ಪ್ರಶ್ನೆಯೊಂದಿಗೆ ಪೌಲನು ಪ್ರಾರಂಭಿಸುವುದನ್ನು ಪರಿಗಣಿಸುವುದು ಬಹಳ ಆಸಕ್ತಿಕರವಾಗಿದೆ. ಇಂತಹ ಜನರಿಗಾಗಿ ಅಪೊಸ್ತಲರ ಕೃತ್ಯಗಳು 19ರಲ್ಲಿ ಪೌಲನು ಪ್ರಾರ್ಥಿಸಿದಂತೆ ಯೇಸುಕ್ರಿಸ್ತನನ್ನು ನಂಬಿದಂತಹ ಹೊಸ ವಿಶ್ವಾಸಿಗಳು ಪವಿತ್ರಾತ್ಮನನ್ನು ಪಡೆದುಕೊಳ್ಳಲೂ ಪ್ರಾರ್ಥಿಸುವಂತದ್ದನ್ನು ಎದುರು ನೋಡುವಂತದ್ದು ಸಾಮಾನ್ಯವಾದುದೆಂಬುದಾಗಿ ತಿರುಗಿ ತೋರಿಸಲ್ಪಟ್ಟಿದೆ.

ಪೌಲನು ಅವರಿಗೆ ಯೇಸುಕ್ರಿಸ್ತನ ಕುರಿತು ಪ್ರಸಂಗಿಸಿದನು. ನೀರಿನಿಂದ ಅವರಿಗೆ ದೀಕ್ಷಾಸ್ನಾನ ಮಾಡಿಸಿದನು. ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದಿಕೊಳ್ಳುವದಕ್ಕೆ ಅಂದರೆ ಪವಿತ್ರಾತ್ಮನನ್ನು ಪಡೆದುಕೊಳ್ಳುವದಕ್ಕೆ ಅವರಿಗಾಗಿ ಪ್ರಾರ್ಥಿಸುವದಕ್ಕೆ ಮುಂದುವರೆಸಿದನು. ಪುನಃ ಮತ್ತೊಮ್ಮೆ, ಹಿಂದೆ ಜರುಗಿದಂತೆ, ಪವಿತ್ರಾತ್ಮನ ಸುರಿಸುವಿಕೆ ಅಥವಾ ಪವಿತ್ರಾತ್ಮನ ದೀಕ್ಷಾಸ್ನಾನವು ಅಸಾಧರಣ ತೋರ್ಪಡಿಸುವಿಕೆ- ಅನ್ಯಭಾಷೆಯಲ್ಲಿ ಪ್ರಾರ್ಥಿಸುವದು ಇವುಗಳ ಜೊತೆಗೂಡುವಿಕೆ ಇಲ್ಲಿ ನಾವು ಗಮನಿಸಬಹುದು, ಇಲ್ಲಿ ಕಾಣುವ ಘಟನೆಯಲ್ಲಿ ಅವರು ಪ್ರವಾದಿಸಿದರು. ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವಾದದ್ದನ್ನು ನಾವು ಗಮನಿಸಬಹುದಾಗಿದೆ ಮತ್ತು ಈ ಒಂದು ನಿದರ್ಶನದಲ್ಲಿ ಅವರು ಸಹ ಪ್ರವಾದಿಸಿದರು.

## ಐದು ದಾಖಲಿತ ಘಟನಾವಳಿಗಳು ಸಾರಾಂಶ

ದಾಖಲಿಸ್ಪಟ್ಟಂತಹ **ಐದು ಘಟನೆಗಳ ಮೂರರಲ್ಲಿ** ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿದ ಜನರು **ಅನ್ಯಭಾಷೆಗಳಲ್ಲಿ ಮಾತಾನಾಡಿದರು** ಎಂಬುದು ಸ್ಪಷ್ಟವಾಗಿದೆ. ಇತರೆ ಎರಡು ಘಟನೆಗಳಲ್ಲಿ ಸಮಾರ್ಯದಲ್ಲಿ ಅತ್ಯದ್ಭುತಕರವಾದುದು ಜರುಗಿತೆಂದು ನಾವು ಊಹಿಸಿಕೊಳ್ಳುತ್ತೇವೆ. ಆಮೇಲೆ ಸೌಲನ ಘಟನೆಯಲ್ಲಿ ಅವನು ಅನ್ಯಭಾಷೆಯೊಡನೆ ಮಾತನಾಡಿದನು ಎಂಬುದು ನಮಗೆ ತಿಳಿದದೆ. ಆದ್ದರಿಂದ ಐದು ಘಟನೆಗಳಲ್ಲಿ ಅಪ್ರಾಕೃತವಾದಂತದ್ದು ಜರುಗಿತೆಂಬುದ್ದನ್ನು ವ್ಯಾಖ್ಯಾನಿಸುವುದು ಸೂಕ್ತವಾಗಿದೆ ಮತ್ತು ಐದು ದೃಷ್ಟಾಂತದ ನಾಲ್ಕು ನಿದರ್ಶನಗಳಲ್ಲಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಅವರು ಸ್ಪಷ್ಟವಾಗಿ ಅನ್ಯಭಾಷೆಯಲ್ಲಿ ಮಾತನಾಡಿದರು ಎಂಬ ನಿರ್ಣಾಯಕವಾದ ಹೇಳಿಕೆಯನ್ನು ಕೊಡಬಹುದು.

**ಐದರಲ್ಲಿ ಮೂರು** ಘಟನೆಗಳಲ್ಲಿ ಅವರು ಪವಿತ್ರಾತ್ಮದಲ್ಲಿ ದೀಕ್ಸಾಸ್ನಾನ ಮಾಡಿಸಿಕೊಂಡರು ಮತ್ತು ತದನಂತರ ನೀರಿನಲ್ಲಿ ದೀಕ್ಷಾಸ್ನಾನ ಹೊಂದಿದ್ದರು ಐದರಲ್ಲಿ ಎರಡು ಘಟನೆಗಳು ಸಮಾರ್ಯದಲ್ಲಿ ಮತ್ತು ಎಫೆಸದಲ್ಲಿ ಅವರು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು ನಂತರ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದ್ದರು. ಆದ್ದರಿಂದ ದೇವರು ಎರಡೂ ರೀತಿಗಳಲ್ಲೂ ಕಾರ್ಯ ಮಾಡುತ್ತಾನೆ ಮತ್ತು ಇಂತಹ ಪ್ರಕ್ರಿಯೆಯಲ್ಲಿ ಯಾವುದೇ ''ನಿಗಧಿತ'' ಹಂತಗಳು ಇಲ್ಲ ಎಂಬುದನ್ನು ಹೇಳಿಕೆ ಕೊಡುವದು ಸುರಕ್ಷಿತವಾದುದ್ದಾಗಿದೆ.

ಪವಿತ್ರಾತ್ಮದಲ್ಲಿನ ದೀಕ್ಷಾಸ್ನಾನದ ಉದ್ದೇಶವು, ಸಾಕ್ಷಿಯಾಗಿರಲು ಬಲವನ್ನು ಪಡೆದುಕೊಳ್ಳುವುದಾಗಿದೆ. ನಮಗೆ ತಿಳಿದಿರುವಂತೆ ಪವಿತ್ರಾತ್ಮನ ತೋರ್ಪಡಿಸುವಿಕೆ ಅಥವಾ ಪವಿತ್ರಾತ್ಮನ ವರವಾದ, ಅನ್ಯಭಾಷೆಯಲ್ಲಿ ಮಾತನಾಡುವ ಅಸಾಧರಣ ತೋರ್ಪಡಿಸುವಿಕೆಗಳ ಮೂಲಕವಾಗಿ ಬಲ ಹೊಂದಿಕೊಂಡದ್ದನ್ನು ವ್ಯಕ್ತಪಡಿಸಬಹುದು (1 ಕೊರಿಂಥದವರಿಗೆ 12:7-11).

ಆದ್ದರಿಂದ, ಕೆಲವು ಕಡಿತಗಳನ್ನು ಅಥವಾ ಕಳೆಯುವುದನ್ನು ಇಲ್ಲಿ ನಾವು ಮಾಡೋಣ:

- ನಾವು ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಮಾಡಿಸಿಕೊಂಡಾಗ **ವರಗಳು ಮತ್ತು ಬಲ ಎರಡನ್ನು ನಾವು ಪಡೆದುಕೊಳ್ಳುತ್ತೇವೆ.** ದೇವರ ಆತ್ಮನು ವಿಶ್ವಾಸಿಗಳನ್ನು ಬಲದೊಡನೆ ಹೊದಿಸುತ್ತಾನೆ ಅಥವಾ ತುಂಬಿಸುತ್ತಾನೆ. ಮತ್ತು ಈ ಹಂತದಿಂದ ವಿಶ್ವಾಸಿಗಳಿಗೆ ಎಲ್ಲಾ 9 ವರಗಳು ಸಮರ್ಥವಾಗಿ ದೊರೆಯುವಂತೆ ಮಾಡುತ್ತಾನೆ. ಇವುಗಳು ''ಆತ್ಮನ ವರಗಳು'' ಒಬ್ಬ ವ್ಯಕ್ತಿಗೆ ಸೇರಿದ ವರಗಳಲ್ಲ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಆದ್ದರಿಂದ, ಪವಿತ್ರಾತ್ಮನು ಇಂತಹ ವರಗಳನ್ನು ಸ್ವಂತವಾಗಿ ಹೊಂದಿರುತ್ತಾನೆ ಮತ್ತು ವಿಶ್ವಾಸಿಗಳ ಮೂಲಕ ಅವುಗಳಲ್ಲಿ ಕಾರ್ಯಮಾಡುತ್ತಾನೆ. ಇಂತಹ ವರಗಳನ್ನು ತೋರ್ಪಡಿಸಲೂ ಪವಿತ್ರಾತ್ಮದೊಡನೆ ಸಹಕಾರ ಮಾಡುವುದನ್ನು ವಿಶ್ವಾಸಿಗಳು ಕಲಿಯಬೇಕು.
- ನಾವು ಹೊಂದಿಕೊಳ್ಳುವ ಬಲವನ್ನು **ಪವಿತ್ರಾತ್ಮನ ವರಗಳಾದ ಅದ್ಭುತಕಾರ್ಯ,** ಸೂಚಕ ಕಾರ್ಯ, ಮಹತ್ಕಾರ್ಯ, ಸ್ವಸ್ಥತೆ ಮತ್ತು ದೇವರ ಅತ್ಯಧ್ಭುತ ಕಾರ್ಯಗಳ ಪ್ರದರ್ಶನದ ಮೂಲಕ ವ್ಯಕ್ತಪಡಿಸಬಹುದು.
- ಸಾಮಾನ್ಯವಾಗಿ ಕಾಣಲ್ಪಟ್ಟಂತಹ ಮೊದಲ ವರವು ಅನ್ಯಭಾಷೆಯಲ್ಲಿ ಮಾತಾಡುವುದಾಗಿದೆ. ದೇವರು ಉದ್ದೇಶಪೂರ್ವಕವಾಗಿ ಕಾರ್ಯಗಳನ್ನು ಮಾಡುತ್ತಾನೆ. ಅರಿಯದ ಅನ್ಯಭಾಷೆಗಳಲ್ಲಿ ಮಾತಾನಾಡುವಂತಹ ವರವು ಆತ್ಮನ ಉಳಿದ ಇತರೆ ಎಲ್ಲಾ ವರಗಳಲ್ಲಿ ತುಂಬಿಸಲ್ಪಟ್ಟ ಪ್ರವಹಿಸಲು ನಮಗೆ ಕೀಲಿಕೈಯಾಗಿ ಸಹಾಯ ಮಾಡುತ್ತದೆ ಎಂಬುದಾಗಿ ನಾವು ನಿರ್ಣಯಿಸಿಕೊಳ್ಳಬಹುದು.

# 3
# ಸಾಮಾನ್ಯ ಪ್ರಶ್ನೆಗಳು

ಪವಿತ್ರಾತ್ಮದೊಡನೆ ದೀಕ್ಷಾಸ್ನಾನವಾಗುವುದರ ವಿಷಯದಲ್ಲಿ ವಿಶ್ವಾಸಿಗಳು ಕೇಳಿದಂತ ಕೆಲವು ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಒಂದು ಅಧ್ಯಾಯದಲ್ಲಿ ಅನ್ವೇಷಿಸೋಣ.

## ವಾಸಿಸುವುದು ಮತ್ತು ದೀಕ್ಷಾಸ್ನಾನ—ವ್ಯತ್ಯಾಸವೇನು?

ಒಬ್ಬನು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವಾಗ, ಒಬ್ಬನು ಹೊಸದಾಗಿ ಹುಟ್ಟಿದವನಾಗಿದ್ದಾನೆ. ನಾವು ಆತ್ಮನಿಂದ ಹುಟ್ಟಿದವರಾಗುತ್ತೇವೆ.ಗಲಾತ್ಯದವರಿಗೆ 4:6ರಲ್ಲಿ *''ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು!''* ನಾವು ಈಗಾಗಲೇ ಪವಿತ್ರಾತ್ಮನ ಒಂದು ಆಲಯವಾಗಿದ್ದೇವೆ. ಮತ್ತು ಆತ್ಮನು ನಮ್ಮಲ್ಲಿ ವಾಸ ಮಾಡುತ್ತಾನೆ (ಒಳಗೆ ವಾಸಿಸುತ್ತಾನೆ). ಆದ್ದರಿಂದ, ಆಮೇಲೆ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆದುಕೊಳ್ಳಲೂ ಒಬ್ಬ ವಿಶ್ವಾಸಿಯು ಪ್ರಾರ್ಥಿಸುವುದರ ಅಗತ್ಯವೇನು? ''ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿರುವುದರಿಂದ ಪವಿತ್ರಾತ್ಮನು ಕೆಲವು ಭಾಗಗಳಲ್ಲಿ ಬರುವುದಿಲ್ಲ.'' ಆದ್ದರಿಂದ ನೀವು ಆತನನ್ನು ಹೊಂದಿದರೆ, ನೀವು ಆತನ ಎಲ್ಲವನ್ನು ಹೊಂದುವಿರಿ ಎಂಬುದಾಗಿ ಕೆಲವರು ತಮ್ಮ ವಾದವನ್ನು ಪ್ರಸ್ತುತ ಪಡಿಸುತ್ತಾರೆ.

ಆತ್ಮೀಕತೆ ಮತ್ತು ಸ್ವಾಭಾವಿಕತೆ ನಡುವೆ ಹೋಲಿಕೆಗಳು ಇರುವ ಹಾಗೆಯೇ ಕೆಲವು ವ್ಯತ್ಯಾಸಗಳು ಸಹ ಇವೆ. ಆತ್ಮೀಕವಾದ ವಿಷಯಗಳು ಸ್ವಾಭಾವಿಕವಾಗಿ ನಾವು ನೋಡುವ ರೀತಿಗಿಂತ ಆಗಾಗ್ಗೆ ವಿಭಿನ್ನವಾಗಿರುತ್ತವೆ. ನೀವು ಒಬ್ಬ ವ್ಯಕ್ತಿಯನ್ನು ದೈಹಿಕವಾಗಿ ನೋಡಿದಾಗ, ನೀವು ವ್ಯಕ್ತಿಯನ್ನು ಸಂಪೂರ್ಣವಾಗಿ ನೋಡುತ್ತೀರಿ ಇದು ಸತ್ಯವಾಗಿದೆ. ಆ ವ್ಯಕ್ತಿಯು ತನ್ನ ದೇಹದ ಅಂಗಾಂಗಳಲ್ಲಿ ಬೇರೆ ಇತರೆ ಸ್ಥಳಗಳಲ್ಲಿ ಬಿಟ್ಟು ಬಿಟ್ಟಿದ್ದಾನೆ ಎಂಬುದಾಗಿಯಲ್ಲ ಆದಾಗ್ಯೂ ನಾವು ಪವಿತ್ರಾತ್ಮನೆಂಬ ವ್ಯಕ್ತಿಯನ್ನು ಪರಿಗಣಿಸುವಾಗ ಒಂದು ದೊಡ್ಡದಾದ ವ್ಯತ್ಯಾಸವಿದೆ. ಪವಿತ್ರಾತ್ಮನು ಒಬ್ಬ ವ್ಯಕ್ತಿಯಾಗಿದ್ದಾನೆ. ಆದರೆ ನಮ್ಮಂತೆ ಅಲ್ಲ, ಆತನು ಅನಂತವಾದವನು **ಆತನು**

**ಕೊನೆಯಿಲ್ಲದ ಅಥವಾ ಅನಂತನಾಗಿರುವುದರಿಂದ ಆತನು ಬರುತ್ತಾನೆ ಮತ್ತು ಬರುತ್ತಲೇ ಇರುತ್ತಾನೆ.** ಆತನು ಮಿತಿಯಿಲ್ಲದವನಾಗಿರುವುದರಿಂದ ನಾವು ಆತನನ್ನು ''ಅಧಿಕವಾಗಿ'' ಹೊಂದಬಹುದು ಮತ್ತು ನಮ್ಮ ಜೀವಿತಗಳಲ್ಲಿ ಆತನನ್ನು ಎಷ್ಟು ಅನುಭವಿಸಬೇಕೆಂಬುದಕ್ಕೆ ಕೊನೆಯಿಲ್ಲ.

ದೇವರ ವಾಕ್ಯದಲ್ಲಿ, ಪವಿತ್ರಾತ್ಮನ ವಿಭಿನ್ನ ಅಳತೆಗಳು ಇರುವುದನ್ನು ನಾವು ನೋಡುತ್ತೇವೆ. ಮೋಶೆಯ ಮೇಲಿದ್ದಂತಹ ಆತ್ಮವು 70 ಇತರೆ ಹಿರಿಯರಿಗೆ ವಿತರಿಸಲ್ಪಟ್ಟಿತ್ತು ಎಂಬುದನ್ನು ನೋಡುತ್ತೇವೆ (ಅರಣ್ಯಕಾಂಡ 11:16–30). ಮೋಶೆಯು ಹೊತ್ತು ಸಾಗಿಸಿದಂತಹ ಜ್ಞಾನದ ಆತ್ಮನ ಒಂದು ಭಾಗವನ್ನು ಯೆಹೋಶುವನು ಹೊಂದಿಕೊಂಡನು ಎಂಬುದನ್ನು ನೋಡುತ್ತೇವೆ (ಧರ್ಮೋಪದೇಶಕಾಂಡ 34:9). ಎಲೀಯನು ಪರಲೋಕಕ್ಕೆ ಎತ್ತಲ್ಪಟ್ಟ ನಂತರ ಎಲೀಷನ ಮೇಲೆ ಎರಡರಷ್ಟು ಅಳತೆಯ ಆತ್ಮನು ಎಲೀಷನ ಮೇಲೆ ವಿಶ್ರಮಿಸಿದ್ದನ್ನು ನೋಡುತ್ತೇವೆ (2 ಅರಸುಗಳು 2:9,10). ಯೇಸುವಿನ ಮೇಲೆ ಆತ್ಮನು ಅಳತೆ ಇಲ್ಲದೆ ಇದ್ದನು ಎಂಬುದಾಗಿ ಸ್ನಾನಿಕನಾದ ಯೋಹಾನನು ಘೋಷಿಸುತ್ತಾನೆ (ಯೋಹಾನ 3:34).

ವಿಶ್ವಾಸಿಗಳ ಜೀವಿತದಲ್ಲಿ ಆತ್ಮನು ವಾಸಿಸುವ ಕಾರ್ಯ ಮತ್ತು ಆತ್ಮನ ದೀಕ್ಷಾಸ್ನಾನದ ನಡುವೆ ಇರುವ ವ್ಯತ್ಯಾಸವನ್ನು ಈ ಕೆಳಗಿನ ಎರಡು ವಚನಭಾಗಗಳನ್ನು ನೋಡುವುದರಿಂದ ಅರ್ಥಮಾಡಿಕೊಳ್ಳಬಹುದು.

**ಯೋಹಾನ 4:13,14**

**[13] ಯೇಸು ಆಕೆಗೆ ಈ ನೀರನ್ನು ಕುಡಿಯುವವರೆಲ್ಲರಿಗೆ ತಿರಿಗಿ ನೀರಡಿಕೆಯಾಗುವುದು**
**[14] ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ. ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟುಮಾಡುವವ ಎಂದು ಹೇಳಿದನು.**

**ಯೋಹಾನ 7:37–39**

**[37] ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಕೆ ಬಂದು ಕುಡಿಯಲಿ**
**[38] ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು.**
**[39] ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು**

**ಹೇಳಿದನು. ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ.**

ಯೋಹಾನ 4ನೇ ಅಧ್ಯಾಯದಲ್ಲಿ, ಯೇಸುವು ಒಂದು ಒರತೆಯ ಕುರಿತು ಮಾತಾಡಿದ್ದಾನೆ. ಯೋಹಾನ 7ರಲ್ಲಿ, ಒಂದು ನದಿಯ ಕುರಿತು ಆತನು ಮಾತಾಡಿದ್ದಾನೆ. ಒರತೆಯು ವಿಶ್ವಾಸಿಗಳ ಒಳಗೆ ಮಾತ್ರವೇ ಇರುತ್ತದೆ. ನದಿಯು ವಿಶ್ವಾಸಿಗಳಿಂದ ಹೊರಗೆ ಹರಿಯುತ್ತದೆ. ಒಳಗಿರುವ ಒರತೆಯು ಅಥವಾ ಚಿಲುಮೆಯು ವಿಶ್ವಾಸಿಗಳಿಗಾಗಿ ನಿತ್ಯಜೀವ ತರುತ್ತದೆ. ವಿಶ್ವಾಸಿಗಳ ಮೂಲಕವಾಗಿ ಹರಿಯುವ ನದಿಯು ವಿಶ್ವಾಸಿಗಳ ಮೂಲಕವಾಗಿ ಇತರರಿಗೆ ಪವಿತ್ರಾತ್ಮನ ಬಲ ಮತ್ತು ಪ್ರಸನ್ನತೆ ದೊರೆಯುವಂತೆ ಮಾಡುತ್ತದೆ. ಇದು ಅದೇ ನೀರು ಆದರೆ ವಿವಿಧ ಅಳತೆಗಳು ಮತ್ತು ವಿಭಿನ್ನ ಉದ್ದೇಶಗಳಿವೆ. ಆದ್ದರಿಂದ, ಅದೇ ಆತ್ಮನು ಕಾರ್ಯನಿರತನಾಗಿದ್ದಾನೆ. ಆದರೆ ಅಳತೆ ಮತ್ತು ಉದ್ದೇಶದಲ್ಲಿ ವ್ಯತ್ಯಾಸವಿದೆ.

## 1 ಕೊರಿಂಥದವರಿಗೆ 12:13 – ಇದರ ಕುರಿತು ಏನು?

**1 ಕೊರಿಂಥದವರಿಗೆ 12:13**
**ಹಾಗೆಯೇ ಕ್ರಿಸ್ತನು ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರೂ ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು.**

ಕೆಲವು ಸಾರಿ ಜನರು ಪವಿತ್ರಾತ್ಮದಲ್ಲಿ ನಾವೇಲ್ಲರೂ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆ ಎಂಬುದಕ್ಕೆ 1 ಕೊರಿಂಥದವರಿಗೆ 12:13ರ ವಚನಭಾಗವನ್ನು ಹೇಳಿಕೆ ಕೊಡಲು ಉಪಯೋಗಿಸುತ್ತಾರೆ. ರಕ್ಷಿಸಲ್ಪಡುವಂತಹ **ಒಂದೇ ದೀಕ್ಷಾಸ್ನಾನವಿದೆ** (ಎಫೆಸದವರಿಗೆ 4:5)ಆದರೆ ವಿಶ್ವಾಸಿಗಳು ಅನುಭವಿಸುವಂತ ಮತ್ತು ವಿಶ್ವಾಸಿಗಳಿಗೆ ಭೋದಿಸಲ್ಪಡಬೇಕಾದಂತ **ಅನೇಕ ದೀಕ್ಷಾಸ್ನಾನವಿದೆ** (ಇಬ್ರಿಯ 6:2).

1 ಕೊರಿಂಥದವರಿಗೆ 12:13ರಲ್ಲಿ ಉಲ್ಲೇಖಿಸಿರುವಂತೆ ರಕ್ಷಿಸುವ ಒಂದೇ ದೀಕ್ಷಾಸ್ನಾನ ಎಂದರೆ ಒಂದೇ **ದೇಹದೊಳಗಾಗುವ ದೀಕ್ಷಾಸ್ನಾನವಾಗಿದೆ.** ಕ್ರಿಸ್ತನ **ದೇಹದಲ್ಲಿ ಪವಿತ್ರಾತ್ಮದಿಂದ ನಾವು ದೀಕ್ಷಸ್ನಾನ** ಹೊಂದಿದ್ದೇವೆ. ಇದು ರಕ್ಷಣೆಯಲ್ಲಿ ಜರುಗುತ್ತದೆ.

ಆ ಮೇಲೆ **ನೀರಿನ ದೀಕ್ಷಾಸ್ನಾನವಿದೆ,** ನಾವುಗಳು ನೀರಿನಲ್ಲಿ ದೀಕ್ಷಾಸ್ನಾನ ಹೊಂದುವವರಾಗಿರುತ್ತೇವೆ. ನೀರಿನಲ್ಲಿ ಮತ್ತೊಬ್ಬ ವಿಶ್ವಾಸಿಯಿಂದ ನಾವು

ದೀಕ್ಷಾಸ್ನಾನ ಹೊಂದಿಕೊಳ್ಳುತ್ತೇವೆ. ವಿಶ್ವಾಸಿಗಳು ಯೇಸುವಿನ ಹೆಸರಿನಲ್ಲಿ (ಯೇಸುವಿನ ಅಧಿಕಾರದಿಂದ), ತಂದೆಯ ಹೆಸರಿನಲ್ಲಿ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ (ಮತ್ತಾಯ 28:18–20). ನೀರಿನ ದೀಕ್ಷಾಸ್ನಾನವನ್ನು ನಿರ್ವಹಿಸುತ್ತಾರೆ. ಯೇಸುಕ್ರಿಸ್ತನ ಒಬ್ಬ ಶಿಷ್ಯರಾಗಿರುವುದಕ್ಕಾಗಿ ನಮ್ಮನ್ನು ಆಯ್ಕೆ ಮಾಡುವ ವಿಚಾರದಲ್ಲಿ ನೀರಿನ ದೀಕ್ಷಾಸ್ನಾನ ಪ್ರಾರಂಭಿಕ ಘೋಷಣೆಯಾಗಿದೆ ಮತ್ತು ಆತನ ಹೆಸರಿನೊಡನೆ ನಮ್ಮ ಗುರುತು ಆಗಿದೆ. ರಕ್ಷಣೆಯ ನಂತರ ಯಾವುದೇ ಸಮಯದಲ್ಲಿ ನೀರಿನ ದೀಕ್ಷಾಸ್ನಾನ ಜರುಗುತ್ತದೆ.

**ಪವಿತ್ರಾತ್ಮನ ದೀಕ್ಷಾಸ್ನಾನವು** ಸಹ ಇದೆ. ನಾವು ಪವಿತ್ರಾತ್ಮನಲ್ಲಿ ಯೇಸುವಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತೇವೆ. (ಮತ್ತಾಯ 3:11; ಅಪೊಸ್ತಲರ ಕೃತ್ಯಗಳು 1:5,8) ಈ ದೀಕ್ಷಾಸ್ನಾನವು ಶುದ್ಧೀಕರಣ ಮತ್ತು ಬಲಕ್ಕಾಗಿರುವುದಾಗಿದೆ. ಈ ಒಂದು ಪುಸ್ತಕದ ವಿಷಯಾಂಶವಾಗಿರುವ ಪವಿತ್ರಾತ್ಮನ ದೀಕ್ಷಾಸ್ನಾನ ರಕ್ಷಣೆಯ ನಂತರ ಯಾವುದೇ ಸಮಯದಲ್ಲಿ ಜರುಗಬಹುದು ಅಥವಾ ಅಪೊಸ್ತಲರ ಕೃತ್ಯಗಳು 10ನೇ ಅಧ್ಯಾಯದಲ್ಲಿ ಕೊರ್ನೇಲ್ಯನ ಮನೆಯಲ್ಲಿ ಜರುಗಿದಂತೆ ರಕ್ಷಣೆಯ ಸಮಯದಲ್ಲಿ ಜರುಗಬಹುದು.

ಆದ್ದರಿಂದ, ಈ ಮೂರು ದೀಕ್ಷಾಸ್ನಾನಗಳಲ್ಲಿ ಯಾರು ದೀಕ್ಷಾಸ್ನಾನ **ಮಾಡಿಸುತ್ತಾರೆ**, ನಾವು **ಯಾವುದಕ್ಕೆ** ದೀಕ್ಷಾಸ್ನಾನ ಹೊಂದಿದ್ದೇವೆ ಮತ್ತು ದೀಕ್ಷಾಸ್ನಾನದ **ಉದ್ದೇಶವೇನು** ಎಂಬಂತಹ ವ್ಯತ್ಯಾಸಗಳನ್ನು ನೋಡಲಿಕ್ಕಿದ್ದೇವೆ. ಆದ್ದರಿಂದ 1 ಕೊರಿಂಥದವರಿಗೆ 12:13 ಕ್ರಿಸ್ತನ ದೇಹಕ್ಕೆ ದೀಕ್ಷಾಸ್ನಾನ ಹೊಂದಿರುವುದರ ಬಗ್ಗೆ ವ್ಯಾಖ್ಯಾನಿಸುತ್ತದೆ. ಮತ್ತು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದುವುದರಿಂದ ವಿಭಿನ್ನವಾಗಿರುವುದಾಗಿದೆ.

## ಅನ್ಯಭಾಷೆಗಳು ಏಕೆ?

ನಾವು ಆತ್ಮನ ಮೂಲಕ ಮನುಷ್ಯರ ಮತ್ತು ದೇವದೂತರ ಭಾಷೆಗಳಲ್ಲಿ ಪವಿತ್ರಾತ್ಮನ ವರವಾದ ಅನ್ಯಭಾಷೆಗಳನ್ನು ಮಾತಾಡುವ ರೀತಿಯನ್ನು ದೇವರು ರಚಿಸಿದ್ದಾನೆ ಎಂದು ಆಲೋಚಿಸುವದು ಆಸಕ್ತಿಕರವಾಗಿದೆ (1 ಕೊರಿಂಥದವರಿಗೆ 13:1) ಮತ್ತು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆದುಕೊಳ್ಳುವಾಗ ವಿಶ್ವಾಸಿಯ ಮೂಲಕ ಮೊದಲನೇ ವರವಾಗಿ ವ್ಯಕ್ತಪಡಿಸುವದನ್ನು ದೇವರು ಉಪಯೋಗಿಸುವದನ್ನು ಪರಿಗಣಿಸುವದು ಸಹ ಆಸಕ್ತಿಕರವಾಗಿದೆ. ದೇವರು ಯಾಕೆ ಇದನ್ನು ಮಾಡಿದನು?

ಅನೇಕರಿಗೆ, ಅನ್ಯಭಾಷೆಗಳಲ್ಲಿ ಮಾತನಾಡುವದು ತರ್ಕಬದ್ಧ ಮನಸ್ಸಿಗೆ ಆಕ್ಷೇಪಾರ್ಹವಾಗಿದೆ. ಮಾತಾನಾಡುವುದನ್ನು ದೇವರು ರಚಿಸಿದ್ದಾನೆ. ಎಂಬುದರ ಕುರಿತು ಆಲೋಚಿಸುವಾಗ ಇದು ಸಾಕಷ್ಟು ಆಸಕ್ತಿಕರವಾಗಿರುವುದರ ಮೇಲೆ ವಿಶ್ವಾಸಿಗಳ ಮೂಲಕವಾಗಿ ತೋರ್ಪಡಿಸಲ್ಪಟ್ಟಂತಹ ಮೊದಲ ವರವಾಗಿ ದೇವರು ಉಪಯೋಗಿಸಿದ್ದನ್ನು ಪರಿಗಣಿಸುವುದು ಸಹ ಆಸಕ್ತಿಕರವಾಗಿದೆ. ದೇವರು ಇದನ್ನು ಏಕೆ ಮಾಡಿದನು? ಅನೇಕರಿಗೆ ''ಇತರೆ ಭಾಷೆಗಳಲ್ಲಿ ಮಾತಾಡುವುದು'' ತರ್ಕಬದ್ಧ ಮನಸ್ಸಿಗೆ ಅಪರಾಧದಂತೆ ತೋರುತ್ತದೆ.

ಆದರೆ, ನಾವು ಏಕೆ ಅನ್ಯ ಭಾಷೆಗಳಲ್ಲಿ ಮಾತಾನಾಡುವುದನ್ನು ಸುತ್ತುಗಟ್ಟಬೇಕು ಎಂಬುದಕ್ಕೆ ಇದು ಬಹಳ ಕಾರಣವಾಗಿದೆ. ನಾವು ದೇವರಲ್ಲಿ ಭರವಸೆಯಿಡುತ್ತೇವೆ. ಆತನ ಜ್ಞಾನವನ್ನು ನಂಬುತ್ತೇವೆ. ನಮ್ಮ ಪ್ರಜ್ಞೆಗೆ ಮೀರಿ ಆತನಲ್ಲಿ ಭರವಸೆಯಿಡುತ್ತೇವೆ. ಆದ್ದರಿಂದ ಸಾಮಾನ್ಯವಾಗಿ ಆತನು ಮಾಡುವಂತಹ ಹಾಗಾಗಿ ಆತನು ಕಾರ್ಯ ಮಾಡುವ ಮಾರ್ಗವನ್ನು ನಾವು ಅಪ್ಪಿಕೊಂಡು ಮುಂದೆ ಸಾಗಬೇಕು. ಇತರೆ ಎಲ್ಲಾ ವರಗಳನ್ನು ಪ್ರದರ್ಶಿಸಲು ಅದೇ ರೀತಿಯ ನಂಬಿಕೆ ಅಗತ್ಯವಾಗಿದೆ ಮತ್ತು ನಮ್ಮ ಸ್ವಂತ ಜ್ಞಾನದ ಹೊರಗೆ ಹೆಜ್ಜೆ ಇಡುವ ಮನಸ್ಸು ಮತ್ತು ಅತನಲ್ಲಿ ಭರವಸೆ ಇಡಬೇಕಾಗಿದೆ. ಹೀಗಿರುವಾಗ ವರಗಳ ಮೂಲಕವಾಗಿ ಆತನ ಬಲವು ಪ್ರದರ್ಶಿಸಲ್ಪಡುತ್ತದೆ.

## ಅನ್ಯಭಾಷೆಗಳಲ್ಲಿ ಮಾತನಾಡುವುದು ಪವಿತ್ರಾತ್ಮನ ದೀಕ್ಷಾಸ್ನಾನದ ಪುರಾವೆಯೆ?

ಅನ್ಯಭಾಷೆಗಳಲ್ಲಿ ಮಾತನಾಡುವುದರ ಪ್ರಯೋಜನಗಳ ಮೇಲೆ ಅಧಿಕ ಮಾಹಿತಿಗಳಿಗಾಗಿ ನಮ್ಮ ಏ.ಪಿ.ಸಿ ಪ್ರಕಾಶನ ''**ಅನ್ಯಭಾಷೆಗಳಲ್ಲಿ ಮಾತನಾಡುವುದರಲ್ಲಿ**'' ಇರುವ ಅತ್ಯದ್ಭುಕರ ಪ್ರಯೋಜನಗಳು ಎಂಬ ಉಚಿತ ಪುಸ್ತಕ ನೋಡಿರಿ. ಉಚಿತವಾಗಿ **apcwo.org/books** ನಲ್ಲಿ ಡೌನ್‌ಲೋಡ್ ಮಾಡಿರಿ.

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿನ ಐದು ದಾಖಲಿತ ಘಟನೆಗಳ ಕಡೆಗೆ ಹೋಗುವಾಗ ಈ ಒಂದು ಪ್ರಶ್ನೆಗೆ ಉತ್ತರ ''ಹೌದು.'' ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಹೊಂದಿದಾಗ ಜನರು ಅನ್ಯಭಾಷೆಗಳಲ್ಲಿ ಮಾತನಾಡಿದರು. ಇದು ಸರ್ವಸಾಮಾನ್ಯವಾದದ್ದು ಮತ್ತು ಎದುರು ನೋಡುತ್ತಿದದ್ದು.

ಇನ್ನೊಂದು ಕಡೆ, ಆತ್ಮನ 9 ವರಗಳು ಇವೆ ಎಂಬುದು ನಮಗೆ ಗೊತ್ತಿದೆ. ಆದ್ದರಿಂದ ಆತ್ಮನಲ್ಲಿ ''ಒಬ್ಬ ವಿಶ್ವಾಸಿಯು ದೀಕ್ಷಾಸ್ನಾನ ಹೊಂದಿದಾಗ ಅನ್ಯಭಾಷೆಗಳೊಡನೆ ಮಾತಾನಾಡುವುದ್ದನ್ನು ಹೊರತು ಪಡಿಸಿ ಇತರೆ ವರಗಳಲ್ಲಿ ಯಾವುದಾದರೊಂದನ್ನು ತೋರ್ಪಡಿಸಲೂ ಪವಿತ್ರಾತ್ಮನು ಆಯ್ಕೆಮಾಡುವುದನ್ನು ಪ್ರಸ್ತಾಪಿಸಿದರೆ?'' ಎಂಬ ಒಂದು ಸಾಮಾನ್ಯ ಪ್ರಶ್ನೆ ಬರುತ್ತದೆ. ನಾವು ಇದಕ್ಕೆ ಸಂಪೂರ್ಣವಾಗಿ ತೆರೆದವರಾಗಿರುತ್ತೇವೆ ಮತ್ತು ಇದು ಸ್ಪಷ್ಟವಾಗಿ ಸಾಧ್ಯಕರ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಅನ್ಯಭಾಷೆಯಲ್ಲಿ ಮಾತನಾಡದೆ ಹೊರತುಪಡಿಸಿ ಇತರೆ ಆತ್ಮನ ವರಗಳನ್ನು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿದ ಒಬ್ಬ ವಿಶ್ವಾಸಿಯು ತೋರ್ಪಡಿಸುವುದು ಸಾಧ್ಯವೇ? ಖಂಡಿತವಾಗಿಯೂ, ಹೌದು.

ಹೇಗಿದ್ದರೂ, ನಮ್ಮ ಗುರಿ ಒಬ್ಬ ವಿಶ್ವಾಸಿ ಪವಿತ್ರಾತ್ಮನ ಎಲ್ಲಾ ಒಂಬತ್ತು ವರಗಳಲ್ಲಿ ಸಕ್ರಿಯವಾಗಿರುವದು ಮತ್ತು ಅವುಗಳಲ್ಲಿ ಹರಿಯುವದನ್ನು ನೋಡುವದಾಗಿರುವದರಿಂದ, ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಪಡೆದುಕೊಳ್ಳಲು ಅವರು ಪ್ರಾರ್ಥಿಸುವಾಗ ವಿಶ್ವಾಸಿಗಳು ಅನ್ಯಭಾಷೆಗಳಲ್ಲಿ ಮಾತಾಡುವದನ್ನು ಆಶಿಸಬೇಕು ಮತ್ತು ನಿರೀಕ್ಷಿಸಬೇಕು ಎಂದು ಯಾವಾಗಲೂ ನಾವು ಪ್ರೋತ್ಸಾಹಪಡಿಸುತ್ತೇವೆ. ಬೇಗನೇ ಅಥವಾ ತಡವಾಗಿ ಅವರು ಇತರೆ ಅನ್ಯಭಾಷೆಗಳಲ್ಲಿ ಮಾತಾನಾಡಲೂ ಪ್ರಾರಂಭಿಸುತ್ತಾರೆ. ನಾವು ಅಲ್ಲಿಯೇ ನಿಲ್ಲಿಸುವುದಿಲ್ಲ. ಆತ್ಮನ ಎಲ್ಲಾ ಒಂಭತ್ತು ವರಗಳಲ್ಲಿ ಪ್ರವಹಿಸಲು ಶ್ರದ್ಧೆಯಿಂದ ಅಪೇಕ್ಷಿಸಬೇಕೆಂಬುದಾಗಿ ನಾವು ಅವರನ್ನು ಪ್ರೋತ್ಸಾಹಿಸುತ್ತೇವೆ.

ಎಲ್ಲಾ ವಿಶ್ವಾಸಿಗಳು ಇತರೆ ಅನ್ಯಭಾಷೆಗಳಲ್ಲಿ ಮಾತನಾಡುವುದನ್ನು ನಾವು ಪ್ರೋತ್ಸಾಹಿಸುತ್ತೇವೆ. ಯಾಕೆಂದರೆ ಇದನ್ನು ಮಾಡಲು ಕರ್ತನಾದ ಯೇಸುವು ಮಾರ್ಕ 16:17,18ರಲ್ಲಿ ಹೇಳಿದ್ದಾರೆ, *''ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೈಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.''*

## ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಪಡೆದುಕೊಳ್ಳಲೂ ನಾನು ''ಕಾದುಕೊಂಡಿರಬೇಕಾ''?

ಇಲ್ಲ. ನಾವು ತಡ ಮಾಡುವ ಅಗತ್ಯವಿಲ್ಲ. ನಾವು ನಂಬಿಕೆ ಮತ್ತು ಎದುರುನೋಡುವುದರಿಂದ ಪ್ರಾರ್ಥಿಸಬೇಕು ಆದರೆ ನಾವು ಅನೇಕ ದಿವಸಗಳವರೆಗೂ ''ವಿಳಂಬ ಮಾಡುವುದು'' ಅಗತ್ಯವಿಲ್ಲ ಯೆರೂಸಲೇಮಿನಲ್ಲಿ ಮೊದಲ 120 ಮಂದಿ ಶಿಷ್ಯರುಗಳು ಕಾದುಕೊಂಡಿದ್ದು ಕಾರಣವೇನೆಂದರು, ಪಂಚಾಶತ್ತಮ ದಿನಕ್ಕಾಗಿ ಕಾದುಕೊಂಡಿರುವುದಾಗಿತ್ತು. ಯಾಕೆಂದರೆ ಆ ದಿನದಲ್ಲಿ ದೇವರು ಆತನ ಆತ್ಮವನ್ನು ಸುರಿಸುತ್ತೇನೆ ಎಂಬುದಾಗಿ ಗೊತ್ತುಪಡಿಸಿದನು. ಆನಂತರದ ಘಟನೆಗಳಲ್ಲಿ ಪ್ರಾರ್ಥನೆಯ ಸಮಯದ ಅವಧಿಯಲ್ಲಿ ಜನರು ಪ್ರಾರ್ಥಿಸಿದರು ಮತ್ತು ಪವಿತ್ರಾತ್ಮನ ದೀಕ್ಷಾಸ್ನಾನ ಪಡೆದುಕೊಂಡರು ಎಂಬುದನ್ನು ನಾವು ನೋಡುತ್ತೇವೆ.

## ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಪಡೆದುಕೊಳ್ಳಲು ನನ್ನ ಮೇಲೆ ಕೈಗಳನ್ನು ಇಡುವಂತದ್ದು ನನಗೆ ಅಗತ್ಯವಾಗಿದೆಯಾ?

ಅವಶ್ಯಕವಿಲ್ಲ. ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಮಾಡಿಸುವವನು ಕರ್ತನಾದ ಯೇಸುವು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ಆತನು ಬೇರೆ ಯಾರನ್ನಾದರೂ ನಿಮ್ಮೊಡನೆ ಪ್ರಾರ್ಥಿಸಲು ಉಪಯೋಗಿಸಬಹುದು ಅಥವಾ ನಿಮ್ಮ ಮೇಲೆ ಕೈಗಳನ್ನಿಟ್ಟು ನಿಮ್ಮೊಂದಿಗೆ ಪ್ರಾರ್ಥನೆಯನ್ನು ಯಾರಾದರೂ ಮಾಡದೇ ಇರುವಾಗಲೂ ಆತನು ನಿಮಗಾಗಿ ಇದನ್ನು ಮಾಡುತ್ತಾನೆ. ಪವಿತ್ರಾತ್ಮನ ದೀಕ್ಷಾಸ್ನಾನಕ್ಕಾಗಿ ಯಾರೂ ಪ್ರಾರ್ಥಿಸದೆ ನೀವೆ ವಯಕ್ತಿಕವಾಗಿ ಪ್ರಾರ್ಥಿಸಿಬಹುದು ಮತ್ತು ನಂಬಿಕೆಯಿಂದ ಅದನ್ನು ಪಡೆದುಕೊಳ್ಳಬಹುದು. ಪಂಚಾಶತ್ತಮ ದಿನದಲ್ಲಿ ಮತ್ತು ಕೊರ್ನೇಲ್ಯನ ಮನೆಯಲ್ಲಿ ಅವರ ಮೇಲೆ ಯಾರೋಬ್ಬರು ಕೈಗಳನ್ನು ಇಡದೇ ಜನರ ಮೇಲೆ ಪವಿತ್ರಾತ್ಮನು ಬಂದನು.

## ಪವಿತ್ರಾತ್ಮದೊಡನೆ ದೀಕ್ಷಾಸ್ನಾನಕ್ಕಾಗಿ ಪ್ರಾರ್ಥಿಸುವ ಮೊದಲು ನೀರಿನಲ್ಲಿ ನಾನು ದೀಕ್ಷಾಸ್ನಾನ ಹೊಂದುವುದು ಅವಶ್ಯಕವಾಗಿದೆಯಾ?

ಅವಶ್ಯಕವಾಗಿ ಇಲ್ಲ. ಸೌಲನ ಮತ್ತು ಕೊರ್ನೇಲ್ಯನ ಮನೆಯಲ್ಲಿನ ಘಟನೆಗಳಲ್ಲಿ ನಾವು ಈಗಾಗಲೇ ನೋಡಿದಂತೆ, ಜನರು ಮೊದಲು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಪಡೆದುಕೊಂಡರು. ಆ ಮೇಲೆ ನೀರಿನಲ್ಲಿ ದೀಕ್ಷಾಸ್ನಾನ ಹೊಂದಿಕೊಂಡರು.

ಸಮಾರ್ಯ ಮತ್ತು ಎಫೆಸದ ವಿಶ್ವಾಸಿಗಳ ಘಟನೆಯಲ್ಲಿ ಅವರು ಮೊದಲು ನೀರಿನಲ್ಲಿ ದೀಕ್ಷಾಸ್ನಾನ ಹೊಂದಿಕೊಂಡರು, ಆಮೇಲೆ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಪಡೆದುಕೊಂಡರು. ಆದ್ದರಿಂದ, ದೇವರು ಯಾವುದೇ ರೀತಿಯಲ್ಲಿ ಕಾರ್ಯಮಾಡಬಹುದು.

## ಅನ್ಯಭಾಷೆಗಳಲ್ಲಿ ಮಾತಾಡುವದು ಯಾವಾಗಲು ಅರ್ಥವಾಗಬೇಕಾ?

ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ಪಂಚಾಶತ್ತಮದಿನದಲ್ಲಿ, ಅವರಿಗೆ ಚಿರಪರಿಚತವಾದಂತಹ ಭಾಷೆಗಳಲ್ಲಿ ದೇವರ ಅತ್ಯದ್ಭುತಕರ ಕಾರ್ಯಗಳನ್ನು ಜನರು ಕೇಳಿದ್ದನ್ನು ನಾವು ನೋಡುತ್ತೇವೆ. ಆ ದಿನದಲ್ಲಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಂತಹ 120 ವಿಶ್ವಾಸಿಗಳು ಭೂಲೋಕದ ಮತ್ತು ಪರಲೋಕದ ಭಾಷೆಗಳನ್ನು ಒಳಗೊಂಡಿದಂತಹ ಅವರು ಅರ್ಥ ಮಾಡಿಕೊಳ್ಳದಂತಹ ಇತರೆ ಅನ್ಯಭಾಷೆಗಳಲ್ಲಿ ಅವರು ಮಾತಾನಾಡಿರುವುದು ಸಾಧ್ಯಕರವಾಗಿರಬಹುದೆಂಬುದನ್ನು ಇದು ಒಳಗೊಂಡಿರಬಹುದು. ಉಪಸ್ಥಿತರಿದ್ದ ಜನರುಗಳ ಭಾಷೆಯಲ್ಲಿ 120 ಮಂದಿ ಮಾತನಾಡಿದರು ಎಂಬುದಾಗಿ ಹೇಳಿದರೆ ಅದು ತಪ್ಪಾಗುತ್ತದೆ. ಉಪಸ್ಥಿತರಿದ್ದ ಜನರು ಅವರವರ ಭಾಷೆಯಲ್ಲಿ ಸಂಗತಿಗಳನ್ನು ಕೇಳಿಸಿಕೊಂಡರು ಎಂಬುದಾಗಿ ವಚನ ಭಾಗವು ವ್ಯಾಖ್ಯಾನಿಸುತ್ತದೆ. ಆದ್ದರಿಂದ 120 ಮಂದಿ ಅನ್ಯಭಾಷೆಗಳಲ್ಲಿ ಮಾತನಾಡಿದಾಗ ಅರಿಯದ ಇತರೆ ಭಾಷೆಗಳನ್ನು ಉಪಯೋಗಿಸಿದರು ಎಂಬಂತಹ ಸಾಧ್ಯತೆಯನ್ನು ಬಿಟ್ಟುಬಿಡಲಾಗುವುದಿಲ್ಲ.

**ಅಪೊಸ್ತಲರ ಕೃತ್ಯಗಳು 2:7-11**

**7 ಎಲ್ಲರು ಆಶ್ಚರ್ಯದಿಂದ ಬೆರಗಾಗಿ ಇಗೋ ಮಾತಾಡುತ್ತಿರುವ ಇವರೆಲ್ಲರು ಗಲಿಲಾಯದವರಲ್ಲವೇ.**

**8 ನಾವು ಪ್ರತಿಯೊಬ್ಬರು ನಮ್ಮ ನಮ್ಮ ಹುಟ್ಟು ಭಾಷೆಯಲ್ಲಿ ಇವರು ಮಾತಾಡುವದನ್ನು ಕೇಳುತ್ತೇವಲ್ಲಾ ಇದು ಹೇಗೆ**

**9 ಪಾರ್ಥ್ಯರೂ ಮೇಧ್ಯರೂ ಏಲಾಮ್ಯರೂ ಮೆಸೊಪೊತಾಮ್ಯ ಯೂದಾಯ, ಕಪ್ಪದೋಕ್ಯ, ಪೊಂತ, ಆಸ್ಯ ಫ್ರುಗ್ಯ,**

**10 ಪಂಫುಲ್ಯ ಐಗುಪ್ತ ಕುರೇನೆಯ ಮಗ್ಗುಲಲ್ಲಿರುವ ಲಿಬ್ಯ, ಈ ಸೀಮೆಗಳಲ್ಲಿ ವಾಸವಾಗಿರುವವರೂ ರೋಮಾಪುರದಿಂದ ಬಂದು ಇಳಿದಿರುವ ಯೆಹೂದ್ಯರೂ ಯೆಹೂದ್ಯ ಮತಾವಲಂಬಿಗಳೂ ಕ್ರೇತ್ಯರೂ**

**11 ಅರಬೀದೇಶದವರೂ ಆಗಿರುವ ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ವಗಳ ವಿಷಯವಾಗಿ ಹೇಳುವದನ್ನು ಕೇಳುತ್ತೇವೆ ಅಂದುಕೊಂಡರು**

ಅಪೊಸ್ತಲರ ಕೃತ್ಯಗಳು 10 ಮತ್ತು 19 ರಲ್ಲಿ, ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿಕೊಂಡಂತಹ ಜನರು, ಭಾಷೆಗಳಲ್ಲಿ ಮಾತಾನಾಡಿದಾಗ ಅಲ್ಲಿ ಉಪಸ್ಥಿತವಿದ್ದವರೆಲ್ಲರೂ ಅರ್ಥಮಾಡಿಕೊಂಡರು ಎಂಬುದಾಗಿ ವಚನಭಾಗಗಳು ನಿರ್ಣಾಯಕವಾಗಿ ತಿಳಿಸುವುದಿಲ್ಲ.

ಮತ್ತೊಂದು ಕಡೆಯಲ್ಲಿ ನಾವು ಅನ್ಯಭಾಷೆಯಲ್ಲಿ ಮಾತಾನಾಡಿದಾಗ ಮಾನವರ ಮತ್ತು ದೇವದೂತರ ಭಾಷೆಗಳನ್ನು ಮಾತಾಡುತ್ತೇವೆ ಎಂಬುದಾಗಿ ವಚನಭಾಗವು ಸೂಕ್ತವಾಗಿ ಬೋಧಿಸುತ್ತದೆ (1 ಕೊರಿಂಥವರಿಗೆ 13:1) ಆದುದರಿಂದ ನಾವು ಮಾತನಾಡುವಂತಹ ಭಾಷೆಗಳು ಬೇರೆ ಯಾರು ಅರ್ಥ ಮಾಡಿಕೊಳ್ಳುವುದಿಲ್ಲ ಎಂಬುದು ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಆದಾಗ್ಯೂ ಅಪೊಸ್ತಲನಾದ ಪೌಲನು ಅನ್ಯಭಾಷೆಯಲ್ಲಿ ಮಾತಾನಾಡಿದಾಗ ''ಅವನನ್ನು ಯಾರು ಅರ್ಥಮಾಡಿಕೊಳ್ಳಲಿಲ್ಲ'' ಎಂಬುದಾಗಿ ಸ್ಪಷ್ಟವಾಗಿ ಹೇಳುತ್ತಾನೆ.

**1 ಕೊರಿಂಥದವರಿಗೆ 13:1**
**ನಾನು ಮನುಷ್ಯರ ಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ.**

**1 ಕೊರಿಂಥದವರಿಗೆ 14:2**
**ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ. ಹೊರತು ಮನುಷ್ಯರ ಸಂಗಡ ಆಡುವದಿಲ್ಲ ಅವನು ಆತ್ಮಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ**

ವಚನಭಾಗಗಳಲ್ಲಿ ನೋಡಿದಂತೆ ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದು/ ಮಾತಾಡುವುದರ ಉಪಯೋಗದಲ್ಲಿ ವಿವಿಧತೆ ಇರುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅವು ಮುಂದಿರುವಂತವುಗಳನ್ನು ಒಳಗೊಂಡಿವೆ.

1) **ವೈಯಕ್ತಿಕ ಪ್ರಾರ್ಥನೆ, ಮಧ್ಯಸ್ಥಿಕೆ ಮತ್ತು ಆತ್ಮಾಭಿವೃದ್ಧಿಗೆ ಅನ್ಯಭಾಷೆಗಳು:** ಒಬ್ಬ ವಿಶ್ವಾಸಿ ಅನ್ಯ ಭಾಷೆಯಲ್ಲಿ ಮಾತಾಡುವಾಗ ಅಥವಾ ಪ್ರಾರ್ಥಿಸುವಾಗ ಅದು ಆಂತರ್ಯದ ಮನುಷ್ಯನ ಭಕ್ತಿವೃದ್ಧಿಗೆ, ನೇರವಾಗಿ ದೇವರೊಂದಿಗೆ ಸಂವಹನ ಮಾಡುವದಕ್ಕೆ ಮತ್ತು ಇತರರಿಗಾಗಿ ಮಧ್ಯಸ್ತಿಕೆ ಮಾಡುವದಕ್ಕೆ ಕಾರಣವಾಗುತ್ತದೆ. ಇದು ಅನ್ಯಭಾಷೆಯಲ್ಲಿ ಮಾತನಾಡುವದರ ಅತೀ ಸಾಮಾನ್ಯವಾದ ಬಳಕೆಯಾಗಿದೆ ಮತ್ತು ಇತರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವುದು ಮುಂತಾದ ಫಲಿತಾಂಶದೊಡನೆ ಕೂಡಿರುವ

ಅನ್ಯಭಾಷೆಯಲ್ಲಿ ವಿಶ್ವಾಸಿಗಳು ಪ್ರಾರ್ಥಿಸುವ/ಮಾತಾನಾಡುವಂತದ್ದಾಗಿದೆ (1 ಕೊರಿಂಥದವರಿಗೆ 14:2,4; ರೋಮಾಪುರದವರಿಗೆ 8:26,27).

2) **ಅರ್ಥ ವಿವರಣೆಗಾಗಿ ಅನ್ಯಭಾಷೆಗಳು:** ಇದು, ಸಮೂಹವಾಗಿ ಸೇರಿ ಬರುವಾಗ ಒಬ್ಬ ವಿಶ್ವಾಸಿ ಅನ್ಯಭಾಷೆಯಲ್ಲಿ ಸಂದೇಶವನ್ನು ಕೊಡುವದಕ್ಕೆ ಪ್ರೇರೆಪಿಸಲ್ಪಡುವಾಗ ಅರ್ಥವಿವರಣೆಯೊಂದಿಗೆ ಮಾಡಿದಲ್ಲಿ ಸೇರಿ ಬಂದಂತಹ ಎಲ್ಲರಿಗೂ ಅರ್ಥವಾಗುತ್ತದೆ ಮತ್ತು ಭಕ್ತಿವೃದ್ಧಿ ಉಂಟಾಗುತ್ತದೆ (1 ಕೊರಿಂಥದವರಿಗೆ 14:5,13).

3) **ಅವಿಶ್ವಾಸಿಗಳಿಗೆ ಅನ್ಯಭಾಷೆಗಳು ಒಂದು ಸೂಚನೆಯಾಗಿದೆ:** ಇದು ಯಾವಾಗ ಎಂದರೆ, ಒಬ್ಬ ವಿಶ್ವಾಸಿಯು ಪವಿತ್ರಾತ್ಮ ಪ್ರೇರಿತನಾಗಿ ಉಪಸ್ಥಿತರಿರುವ ಅವಿಶ್ವಾಸಿಗಳಿಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡುವಾಗ ಕರ್ತನ ಕುರಿತಾದ ಸತ್ಯಾಂಶಗಳನ್ನು ಕೇಳುವದಕ್ಕೆ ಕಾರಣವಾಗುತ್ತದೆ. (1 ಕೊರಿಂಥದವರಿಗೆ 14:22; ಅಪೊಸ್ತಲರ ಕೃತ್ಯಗಳು 2:7–11).

ಹಾಗಾಗಿ, ‘‘ಅನ್ಯಭಾಷೆಯಲ್ಲಿ ಮಾತನಾಡುವದು ಯಾವಾಗಲೂ ಅರ್ಥವಾಗಬೇಕಾ?’’ ಈ ಪ್ರಶ್ನೆಗೆ ಉತ್ತರ, ‘‘ಇಲ್ಲ, ಅನ್ಯಭಾಷೆಯಲ್ಲಿ ಮಾತನಾಡುವದು ಯಾವಾಗಲೂ ಅರ್ಥವಾಗಬೇಕೆಂದಿಲ್ಲ.’’

# 4
# ಸಲಹೆಗಳು ಮತ್ತು ಸ್ವೀಕರಿಸಲು ಪ್ರಾರ್ಥನೆ

ದೀಕ್ಷಾಸ್ನಾನವನ್ನು ಹೊಂದಿಕೊಳ್ಳುವುದು ಪವಿತ್ರಾತ್ಮನ ಒಂದು ನಿರ್ಮಲವಾದ ಕೆಲಸವಾಗಿದೆ. ಇದನ್ನು ನಾವು ತಯಾರಿಸಲಾಗುವುದಿಲ್ಲ ಅಥವಾ ಇದಕ್ಕೆ ಜನರನ್ನು ಬಲವಂತಗೊಳಿಸಲಾಗುವದಿಲ್ಲ ದೇವರ ವಾಕ್ಯ ಇದರ ಕುರಿತು ಏನು ಹೇಳುತ್ತದೆ ಎಂಬುದನ್ನು ನಾವು ಜನರಿಗೆ ಬೋಧಿಸಬೇಕು, ಕೆಲವು ಪ್ರಾಯೋಗಿಕ ಉಪದೇಶಗಳನ್ನು ಹಂಚಿಕೊಳ್ಳಬೇಕು ಮತ್ತು ಆಮೇಲೆ ಪ್ರಾರ್ಥಿಸಬೇಕು. ದೇವರು ಯಾವಾಗಲೂ ಆತನ ವಚನಗಳಿಗೆ ನಂಬಿಗಸ್ತನಾಗಿರುತ್ತಾನೆ ಮತ್ತು ಆತನ ಜನರಿಗೆ ದೀಕ್ಷಾಸ್ನಾನ ನೀಡುತ್ತಾನೆ. ದಾಹಗೊಂಡವರ ಮೇಲೆ ಆತನ ಆತ್ಮವನ್ನು ಸುರಿಸುತ್ತಾನೆ (ಯೆಶಾಯ 44:3).

## ಯೇಸುಕ್ರಿಸ್ತನು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ನೀಡುವಾತನು ಆದ್ದರಿಂದ ಆತನನ್ನು ದೃಷ್ಟಿಸಿ ನೋಡಿರಿ

ಯೇಸುವು ಪವಿತ್ರಾತ್ಮದಲ್ಲಿ ನಮಗೆ ದೀಕ್ಷಾಸ್ನಾನ ಮಾಡಿಸುತ್ತಾನೆ ಎಂಬುದಾಗಿ ಸತ್ಯವೇದ ಹೇಳುತ್ತದೆ (ಮತ್ತಾಯ 3:11). ಆದ್ದರಿಂದ ಒಬ್ಬನು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಪಡೆದುಕೊಳ್ಳಲೂ ಒಬ್ಬ ದೇವರ ಮನುಷ್ಯ ಅಥವಾ ಒಬ್ಬ ಸಭಾಪಾಲಕರ ಅಗತ್ಯವಿಲ್ಲ! ನಮಗೆ ದೀಕ್ಷಾಸ್ನಾನ ಮಾಡಿಸಲು—ನಮ್ಮ ಮೇಲೆ ಪವಿತ್ರಾತ್ಮನನ್ನು ಸುರಿಸಲು ನಾವು ಯೇಸುವನ್ನು ಕೇಳಬೇಕು. ಆತನು ತನ್ನ ಆತ್ಮನನ್ನು ಸುರಿಸುವಾಗ ಪರಲೋಕದ ಭಾಷೆಗಳು ಮುಂದೆ ಬರುತ್ತವೆ.ಅಪೊಸಲ್ತರ ಕೃತ್ಯಗಳು ಪುಸ್ತಕದಲ್ಲಿ ಇದೇ ಜರುಗಿತು—ಜನರು ಪವಿತ್ರಾತ್ಮನ ವರವನ್ನು ಪಡೆದುಕೊಂಡಾಗ ಪ್ರತಿ ಸಮಯದಲ್ಲಿ, ಅತ್ಯದ್ಭುತಕರವಾದ ಸಂಗತಿಗಳು ಜರುಗಿದವು ಅವರು ಅನ್ಯಭಾಷೆಗಳಲ್ಲಿ ದೇವರನ್ನು ಆರಾಧಿಸಲು ಪ್ರಾರಂಭಿಸಿದರು.

## ನೀವು ಒಬ್ಬ ವಿಶ್ವಾಸಿಯಾಗಿದ್ದೀರಿ ಮತ್ತು ಅನ್ಯಭಾಷೆಗಳೊಡನೆ ನೀವು ಮಾತನಾಡಬಹುದು

ಒಬ್ಬ ವಿಶ್ವಾಸಿಯಾಗಿ ಅನ್ಯಭಾಷೆಯಲ್ಲಿ ಮಾತಾನಾಡಬಹುದೆಂಬದ್ದನ್ನು ನೆನಪಿನಲ್ಲಿಟ್ಟಿಕೊಳ್ಳಿರಿ. ಮಾರ್ಕ 16:17,18ರಲ್ಲಿ ಕರ್ತನಾದ ಯೇಸುವು ಹೇಳಿದ್ದಾರೆ.

*''ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು ಹೊಸಭಾಷೆಗಳಿಂದ ಮಾತಾಡುವರು ಹಾವುಗಳನ್ನು ಎತ್ತುವರು ವಿಷ ಪದಾರ್ಥವನ್ನೇನ್ನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು.''*

## ನಂಬಿಕೆಯ ಹೆಜ್ಜೆ ತೆಗೆದುಕೊಳ್ಳಿರಿ

ನಂಬಿಕೆಯಿಂದ ಪವಿತ್ರಾತ್ಮನ ವಾಗ್ದಾನವನ್ನು ನಾವು ಪಡೆದುಕೊಳ್ಳುತ್ತೇವೆ. ಇದು ಪವಿತ್ರಾತ್ಮನ ವರವಾಗಿದೆ ಮತ್ತು ವಾಗ್ದಾನವನ್ನು ಪಡೆದುಕೊಳ್ಳಲು ನಿಮಗೆ ಅವಶ್ಯಕವಾಗಿರುವಂತದ್ದು ಸಾಮಾನ್ಯವಾದ ನಂಬಿಕೆ .

**ಗಲಾತ್ಯದವರಿಗೆ 3:13,14**

**[13] ಅಬ್ರಹಾಮುನಿಗೆ ಉಂಟಾದ ಆಶೀರ್ವಾದವು ಕ್ರಿಸ್ತಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ**

**[14] ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ**

## ಎಲ್ಲಾ ಭಯವನ್ನು ತಿರಸ್ಕರಿಸಿರಿ

ನೀವು ''ಇತರ'' ಆತ್ಮನನ್ನು ಪಡೆದುಕೊಳ್ಳುತ್ತೀರಿ ಎಂಬುದರ ಬಗ್ಗೆ ಯಾವುದೇ ಭಯ ಹೊಂದಿರಬೇಡಿರಿ. ನೀವು ಪ್ರಾರ್ಥಿಸಿ ಕರ್ತನಾದ ಯೇಸುವಿಗೆ ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಮಾಡಿಸಲು ಕೇಳಿಕೊಳ್ಳುವಾಗ ಖಚಿತವಾಗಿ ಇದು ಜರುಗುತ್ತದೆ. ಲೂಕ 11:11–13ರಲ್ಲಿ ಕರ್ತನಾದ ಯೇಸು ಹೀಗೆ ಹೇಳಿದ್ದಾರೆ. *''ನಿಮ್ಮಲ್ಲಿ ತಂದೆಯಾದವನು ಮೀನನ್ನು ಕೇಳುವ ಮಗನಿಗೆ ಮೀನು ಕೊಡದೆ ಹಾವನ್ನು ಕೊಡುವನೇ? ಅಥವಾ ತತ್ತಿಯನ್ನು ಕೇಳಿದರೆ ಚೇಳನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವವನಲ್ಲವೇ ಅಂದನು.''*

## ವಿಶ್ರಾಂತಿ ತೆಗೆದುಕೋ, ದೇವರು ಏನಾದರೊಂದು ಮಾಡಲಿಕ್ಕೆ ಒಪ್ಪಿಸುವದಕ್ಕೆ ನೀನು ಪ್ರಯತ್ನಿಸುತಿಲ್ಲ

ಪವಿತ್ರಾತ್ಮನ ವರವನ್ನು ಪಡೆದುಕೊಳ್ಳಲೂ ಅನೇಕ ಕಣ್ಣೀರು ಸುರಿಸುವದು, ಅಳುವದು, ಮನವಿ ಮಾಡವದು ಉದ್ದವಾದ ಗಂಟೆಗಳು ಕಾದುಕೊಂಡಿರುವದು, ಆತನ ಕೈಯನ್ನು ತಿರುಗಿಸುವ ಅವಶ್ಯವಿಲ್ಲ ದೇವರ ಬಳಿ ಭಿಕ್ಷೆ ಬೇಡುವ ಅವಶ್ಯವಿಲ್ಲ ನಿಮ್ಮ ಜೀವಿತಗಳಲ್ಲಿ ದೇವರು ತನ್ನ ವಾಗ್ದಾನಗಳನ್ನು ನೆರವೇರಿಸಲು ಸಿದ್ಧವಾಗಿದ್ದಾನೆ. ಸುಮ್ಮನೇ ಕೇಳಿರಿ ಮತ್ತು ನಂಬಿಕೆಯಿಂದ ಪಡೆದುಕೊಳ್ಳಿರಿ! **ಮಾರ್ಕನು 11:24 ರಲ್ಲಿ ಯೇಸು ಹೇಳಿದಂತೆ ನಾವೇಲ್ಲರೂ ಪ್ರಾಮಾಣಿಕವಾಗಿ ಅಪೇಕ್ಷಿಸಬೇಕು:** *''ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತೀರೋ ಅದನ್ನೇಲ್ಲಾ ಹೊಂದಿದ್ದೇವೆಂದು ನಂಬಿರಿ ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.''* ಈಗ ಕೆಲವು ನಿಮಿಷಗಳು ನೀವು ಪ್ರಾರ್ಥಿಸುವಾಗ ನೀವು ಕೇಳುತ್ತಿರುವಂತಹ ಈ ಕ್ಷಣದಲ್ಲಿ ನೀವು ಕೇಳಿಕೊಳ್ಳುವಂತದ್ದನ್ನು ಪಡೆದುಕೊಳ್ಳುವಿರಿ.

## ಪವಿತ್ರಾತ್ಮನು ಭಾಷೆ ಕೊಡುತ್ತಾರೆ, ಆದರೆ ನೀವು ಮಾತನಾಡಬೇಕು

**ಅಪೊಸ್ತಲರ ಕೃತ್ಯಗಳು 2:4**
**ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು**

ಈ ಮೇಲಿನ ವಚನಭಾಗದಂತೆ ಪ್ರಾರ್ಥಿಸುವುದನ್ನು ನೀವು ಮಾಡಿದಾಗ, ನಿಮ್ಮ ಬಾಯಿ ತೆರೆಯಿರಿ ಮತ್ತು ಏನೇ ಬಂದರು ಮಾತನಾಡಿರಿ. ಇದು ನಿಮ್ಮ ಧ್ವನಿ ಮತ್ತು ನಿಮ್ಮ ಉಚ್ಚಾರದ ಅಂಗಗಳು ಕಾರ್ಯನಿರತವಾಗಿದೆ. ಪವಿತ್ರಾತ್ಮನು ಮಾತಾಡುವುದಿಲ್ಲ, ನೀವು ಮಾತನಾಡಬೇಕು, ಆತನು ಬರೀ ಭಾಷೆಯನ್ನು ಮಾತ್ರ ಒದಗಿಸುತ್ತಾನೆ.

## ಶಬ್ದಗಳಿಂದ ಮಾಡಲ್ಪಟ್ಟಂತಹ ಒಂದು ಭಾಷೆ

ಒಂದು ಭಾಷೆಯಲ್ಲಿ ಮಾತನಾಡುವುದು ಶಬ್ದಗಳನ್ನು ಮಾಡುವುದನ್ನು ಒಳಗೊಂಡಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಯಾವಾಗ ಈ ಶಬ್ಧಗಳು ಅರ್ಥಗರ್ಭಿತವಾಗಿರುವಾಗ ಮತ್ತು ಕೆಲವು ನಿರ್ಧಿಷ್ಟವಾದ ಕ್ರಮಗಳನ್ನು ಪಾಲಿಸುವಾಗ ಆ ಭಾಷೆಯಲ್ಲಿ ನೀವು ಏನು ಹೇಳುತ್ತಿದ್ದೀರಿ ಎಂಬುದು ಇತರರಿಗೆ ಅರ್ಥವಾಗುತ್ತದೆ. ಅನ್ಯಭಾಷೆಯಲ್ಲಿ ನಾವು ಮನುಷ್ಯರ ಅಥವಾ ದೇವದೂತರುಗಳು ಭಾಷೆಗಳನ್ನು ಮಾತಾಡುತ್ತೇವೆ. ಆದ್ದರಿಂದ ಪವಿತ್ರಾತ್ಮನು ಭಾಷೆಯನ್ನು ಕೊಡುತ್ತಾನೆ

(ಶಬ್ಧಗಳನ್ನು ಪ್ರಚೋದಿಸುತ್ತಾನೆ ಅಥವಾ ಪ್ರೇರೇಪಿಸುತ್ತಾನೆ). ಮತ್ತು ನಿಮ್ಮ ಉಚ್ಚಾರದ ಅಂಗಗಳನ್ನು ಉಪಯೋಗಿಸಿ ನೀವು ವ್ಯಕ್ತಪಡಿಸಬೇಕು. ಇಂತಹ ಧ್ವನಿಗಳು ನೀವು ಕಲಿಯದಿರುವಂತಹ ಒಂದು ಭಾಷೆಯಾಗಿರುವುದರಿಂದ ಇಂತಹ ಸ್ವರಗಳನ್ನು ನಮ್ಮ ಮನಸ್ಸು ಅರ್ಥ ಮಾಡಿಕೊಳ್ಳುವುದಿಲ್ಲ . ಪ್ರಾರಂಭದಲ್ಲಿ ನೀವು ಅಪರಿಚಿತ ಸ್ವರಗಳನ್ನು ಮಾಡುತ್ತಿದ್ದೀರಿ ಎಂಬುದಾಗಿ ಅನಿಸಬಹುದು. ಇಂತಹ ಪದಗಳು (ಸ್ವರಗಳು) ಒಂದು ಅರಿಯದ ಭಾಷೆಯಾಗಿದೆ. ಮುಂದುವರಿಯಿರಿ ಮತ್ತು ಇದಕ್ಕೆ ಸ್ವರ ಕೊಡಿರಿ. ನಂಬಿಕೆಯಿಂದ ನೀವು ಹೆಜ್ಜೆಯನ್ನಿಡುವಾಗ ಅಧಿಕವಾದ ಪದಗಳು ಹರಿಯಲು ಪ್ರಾರಂಭಿಸುತ್ತವೆ.

## ಒಂದು ಸಮಯದಲ್ಲಿ ಒಂದೇ ಭಾಷೆ ಮಾತ್ರ

ಒಂದೇ ಸಮಯದಲ್ಲಿ ನೀವು ಎರಡು ಭಾಷೆಗಳಲ್ಲಿ ಮಾತಾನಾಡಲೂ ಸಾಧ್ಯವಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಆದ್ದರಿಂದ ನಿಮಗೆ ಗೊತ್ತಿರುವಂತಹ ನಿಮ್ಮ ಸ್ವಂತ ಭಾಷೆಯಲ್ಲಿ(ಗಳಲ್ಲಿ) ಏನಾದರೊಂದನ್ನು ಮಾತಾನಾಡಲು ಪ್ರಯತ್ನಿಸಬೇಡಿರಿ. ''ಕರ್ತನಿಗೆ ಸ್ತೋತ್ರ'' ಅಥವಾ ''ಹಲ್ಲೇಲೂಯ'' ಎಂಬುದನ್ನು ಅತಿ ವೇಗವಾಗಿ ಪುನರಾವರ್ತನೆ ಮಾಡಬೇಡಿರಿ. ಇದನ್ನು ಮಾಡುವಂತಹ ಅಗತ್ಯವಿಲ್ಲ. ಇಂತಹವುಗಳು ಆತ್ಮನು ಬಿಡುಗಡೆ ಮಾಡಲೂ ಅಪೇಕ್ಷಿಸುವಂತಹ ಭಾಷೆಯ ಬಿಡುಗಡೆಗೆ ಅಡ್ಡಿಯನ್ನುಂಟು ಮಾಡುತ್ತದೆ. ಬದಲಾಗಿ ಪ್ರಾರ್ಥನೆಯಲ್ಲಿ ಪ್ರಾರ್ಥಿಸುವುದರ ಬದಲೂ ನಂಬಿಕೆಯ ಹೆಜ್ಜೆ ತೆಗೆದುಕೊಳ್ಳಿರಿ ಮತ್ತು ಹೊಸದಾದ ಅನ್ಯಭಾಷೆಗಳಲ್ಲಿ ಮಾತಾನಾಡಿರಿ. ನೀವು ಮಾಡಬಹುದು ಎಂಬುದಾಗಿ ಯೇಸು ಹೇಳಿದ್ದಾರೆ ಆದ್ದರಿಂದ ನೀವು ಮಾಡಬಹುದು!

## ಆತ್ಮನ ಮನಸ್ಸನ್ನು (ಎಲ್ಲಾ ಭಾಷೆಗಳಲ್ಲಿಯೂ) ದೇವರು ಅರ್ಥ ಮಾಡಿಕೊಳ್ಳುತ್ತಾನೆ

ದೇವರು ನಿಮ್ಮ ಹೃದಯಗಳನ್ನು ನೋಡುತ್ತಾನೆ, ನಿಮ್ಮ ಮೂಲಕವಾಗಿ ಪವಿತ್ರಾತ್ಮನು ಏನನ್ನು ಬಿಡುಗಡೆ ಮಾಡುತ್ತಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾನೆ.

**ರೋಮಾಪುರದವರಿಗೆ 8:27**

**ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ. ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವ ಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.**

ನೀವು ಮಾತಾನಾಡುತ್ತಿರುವುದನ್ನು ನೀವು ಅರ್ಥ ಮಾಡಿಕೊಳ್ಳಲಾಗುತ್ತಿಲ್ಲ ಎಂಬ ಸಂಗತಿಯ ಕುರಿತು ಚಿಂತಿಸಬೇಡಿರಿ. ನಾವು ಆತ್ಮದಲ್ಲಿ ಪ್ರಾರ್ಥಿಸಿದಾಗ, ನಮ್ಮ ಆತ್ಮವು ಪವಿತ್ರಾತ್ಮದಿಂದ ಶಕ್ತಗೊಂಡು ಪ್ರಾರ್ಥಿಸುತ್ತದೆ ಮತ್ತು ನಮ್ಮ ಬುದ್ಧಿಯ ಕಾರ್ಯಕ್ಕೆ ಸೇರಿಲ್ಲ ಎಂಬುದನ್ನು ಪೌಲನು ನಮಗೆ ಹೇಳಿದ್ದಾನೆ. ''ಯಾಕೆಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು'' (1 ಕೊರಿಂಥದವರಿಗೆ 14:14). ನಿಮ್ಮ ಮೂಲಕವಾಗಿ ಪವಿತ್ರಾತ್ಮನು ಬಿಡುಗಡೆ ಮಾಡುತ್ತಿರುವುದನ್ನು ದೇವರು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಇದು ಅರ್ಥ ಮಾಡಿಕೊಳ್ಳುತ್ತಾನೆ.

## ಪ್ರಾರ್ಥನೆ

ಪವಿತ್ರಾತ್ಮನ ದೀಕ್ಷಾಸ್ನಾನ ಪಡೆದುಕೊಳ್ಳಲೂ ಮತ್ತು ಬೇಡಿಕೊಳ್ಳಲೂ ಒಂದು ಸಾಮಾನ್ಯ ಪ್ರಾರ್ಥನೆ ಇಲ್ಲಿದೆ. ನೀವು ನಂಬಿಕೆಯಿಂದ ಹೆಜ್ಜೆಯನ್ನಿಡಿರಿ ಮತ್ತು ಪವಿತ್ರಾತ್ಮನು ಕೊಡುವ ಭಾಷೆಗಳಲ್ಲಿ ಮಾತಾನಾಡಿರಿ.

*ಪ್ರಿಯ ಕರ್ತನಾದ ಯೇಸು, ನಾನು ಒಬ್ಬ ವಿಶ್ವಾಸಿ ನನ್ನನ್ನು ಪವಿತ್ರಾತ್ಮದೊಡನೆ ದೀಕ್ಷಾಸ್ನಾನ ಮಾಡಿಸು ಎಂಬುದಾಗಿ ನಾನು ಕೇಳುತ್ತೇನೆ ಆದ್ದರಿಂದ ನಿನಗಾಗಿ ನಾನು ಸಾಕ್ಷಿಯಾಗಿರಲು ಬಲವನ್ನು ನಾನು ಪಡೆದುಕೊಳ್ಳಬಹುದು.*

ಪರಲೋಕದ ತಂದೆಯೇ, ಕಡೇ ದಿವಸದಲ್ಲಿ ನಮ್ಮ ಮೇಲೆ ಆತ್ಮನನ್ನು ಸುರಿಸುತ್ತೇನೆ ಎಂಬುದನ್ನು ವಾಗ್ದಾನ ಮಾಡಿದಂತೆ ನನ್ನ ಮೇಲೆ ಸುರಿಸು ಎಂಬುದಾಗಿ ಯೇಸುವಿನ ನಾಮದಲ್ಲಿ ಕೇಳುತ್ತೇವೆ.

*ಪವಿತ್ರಾತ್ಮನ ಎಲ್ಲಾ ವರಗಳೊಡನೆ, ಪವಿತ್ರಾತ್ಮನ ಸುರಿಸುವಿಕೆಯನ್ನು ಈಗ ನಾನು ನಂಬಿಕೆಯಿಂದ ಪಡೆದುಕೊಳ್ಳುತ್ತೇನೆ. ಪವಿತ್ರಾತ್ಮನು ಈಗ ನನ್ನ ಮೇಲಿದೆ ಮತ್ತು ಆತ್ಮನೊಡನೆ ವಾಸಿಸುವ ಆತನ ಎಲ್ಲಾ ವರಗಳು ನನ್ನಲ್ಲಿವೆ. ಕರ್ತನಾದ ಯೇಸುವೇ ವಂದನೆಗಳು ಯಾಕೆಂದರೆ ನಾನು ಒಬ್ಬ ವಿಶ್ವಾಸಿಯಾಗಿದ್ದೇನೆ.*

*ಈಗ ಆತ್ಮನು ಕೊಡುವಂತಹ ಸಾಮರ್ಥ್ಯದಲ್ಲಿ ನಾನು ಹೊಸ ಅನ್ಯಭಾಷೆಯೊಡನೆ ಮಾತಾಡುತ್ತೇನೆ. ನನ್ನ ಜೀವಿತದ ಮೂಲಕವಾಗಿ ಎಲ್ಲಾ ಇತರೆ ವರಗಳೊಡನೆ ನಾನು ಪ್ರವಹಿಸಲು ಎದುರುನೋಡುತ್ತೇನೆ. ಕರ್ತನಾದ ಯೇಸುವೇ.*

*ವಂದನೆಗಳು, ಪವಿತ್ರಾತ್ಮನೇ ಸ್ವಾಗತ!*

ಪವಿತ್ರಾತ್ಮನ ದೀಕ್ಷಾಸ್ನಾನ ನೀವು ಪಡೆದುಕೊಂಡ ನಂತರ ಪವಿತ್ರಾತ್ಮನ ಎಲ್ಲಾ ವರಗಳ ಕುರಿತು ಅಧಿಕವಾಗಿ ನೀವು ಕಲಿತುಕೊಳ್ಳಲೂ ಪ್ರೋತ್ಸಾಹಿಸುತ್ತೇವೆ. ಅದರ ಮೂಲಕವಾಗಿ ಆತನ ಎಲ್ಲಾ ವರಗಳನ್ನು ಪ್ರದರ್ಶಿಸಲು ಪವಿತ್ರಾತ್ಮನಿಗೆ ಹೇಗೆ ಒಳಗಾಗಬೇಕು ಎಂಬದನ್ನು ನೀವು ಕಲಿಯುವಿರಿ. ಇಂತಹ ವರಗಳ ಮೂಲಕವಾಗಿ ನೀವು ಸೇವೆ ಮಾಡಬಹುದು ಮತ್ತು ಜನರಿಗೆ ಸೇವೆ ಸಲ್ಲಿಸಬಹುದು. ನೀವು ಬಲದೊಡನೆ ಸಾಕ್ಷಿಗಳಾಗಿರುತ್ತೀರಿ. ಯೇಸುಕ್ರಿಸ್ತನು ಮಹಿಮೆ ಹೊಂದುತ್ತಾನೆ!

# 5
# ತುಂಬಿದೆ, ಅಭಿಷೇಕಿಸಲ್ಪಟ್ಟಿದೆ ಮತ್ತು ಆತ್ಮದಲ್ಲಿ ನಡೆಯುವುದು

ವಿಶ್ವಾಸಿಗಳ ಜೀವಿತದಲ್ಲಿ ಪವಿತ್ರಾತ್ಮನ ಕಾರ್ಯಗಳ ಸಂಬಂಧದಲ್ಲಿ ಹೊಸ ಒಡಂಬಡಿಕೆಯಲ್ಲಿ ಅನೇಕ ವಿಭಿನ್ನವಾದ ಪದಗಳು ಅಥವಾ ಅಭಿವ್ಯಕ್ತತೆಗಳನ್ನು ನೋಡುತ್ತೇವೆ. ನಾವು ಬಳಸಬಹುದಾದ ಪದಭಾಷೆಗೆ ಸ್ಪಷ್ಟತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವದಕ್ಕೆ ನಾವು ಕೆಲವೊಂದು ಸಂಕ್ಷಿಪ್ತವಾದಂತಹ ವ್ಯಾಖ್ಯಾನವನ್ನು ಪ್ರಸ್ತುತಪಡಿಸಲಿದ್ದೇವೆ. ಅಂತಹ ಪರಿಭಾಷೆಗಳಿಗೆ ಒಂದು ಪೂರ್ಣವಾದ ವಿವರಣೆ ಇವುಗಳಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ ನಾವು ಇನ್ನೊಂದು ಪುಸ್ತಕದಲ್ಲಿ ಅವುಗಳ ಕುರಿತು ನೋಡೋಣ.

ಮೇಲಂತಸ್ತಿನಲ್ಲಿ 120 ಮಂದಿ ಅನುಭವಿಸಿದ್ದು ಪವಿತ್ರಾತ್ಮನ **ದೀಕ್ಷಾಸ್ನಾನ** ಎಂಬುದಾಗಿ ವ್ಯಾಖ್ಯಾನಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 1:5) ಅವರು ಪವಿತ್ರಾತ್ಮನಿಂದ **ತುಂಬಿಸಲ್ಪಟ್ಟಿದ್ದರು** ಎಂಬುದನ್ನು ಸಹ ನಾವು ಗಮನಿಸುತ್ತೇವೆ (ಅಪೊಸ್ತಲರ ಕೃತ್ಯಗಳು 2:4). ಪುನಃ ಸಮಾರ್ಯದಲ್ಲಿ ಅಪೊಸ್ತಲರು ವಿಶ್ವಾಸಿಗಳ ಮೇಲೆ ಪವಿತ್ರಾತ್ಮನು ''**ಇಳಿದು** ಬರಲು'' ಪ್ರಾರ್ಥಿಸಿದರು ಅವರು ಪವಿತ್ರಾತ್ಮನನ್ನು ***ಪಡೆದುಕೊಂಡರು*** (ಅಪೊಸ್ತಲ ಕೃತ್ಯಗಳು 8:16,17). ಅದೇ ರೀತಿಯಾಗಿ ಕೊರ್ನೇಲ್ಯನ ಮನೆಯಲ್ಲಿ ಜನರು ಸೇರಿ ಬಂದಾಗ ಪೇತ್ರನು ಪ್ರಸಂಗಿಸಿದಾಗ ಅವರು ಪವಿತ್ರಾತ್ಮನಲ್ಲಿ ***ದೀಕ್ಷಾಸ್ನಾನ*** ಹೊಂದಿದರು (ಅಪೊಸ್ತಲ ಕೃತ್ಯಗಳು 11:15-17). ಪವಿತ್ರಾತ್ಮನು ಅವರ ಮೇಲೆ **ಇಳಿದು *ಬಂದನು*** ಮತ್ತು **ಸುರಿಸಿದನು** (ಅಪೊಸ್ತಲ ಕೃತ್ಯಗಳು 10:44,45). ಆದ್ದರಿಂದ ವಿಶ್ವಾಸಿಗಳು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ ಆ ಒಂದು ಸಮಯದಲ್ಲಿ ಅವರು ಪವಿತ್ರಾತ್ಮದೊಡನೆ ತುಂಬಿಸಲ್ಪಡುತ್ತಾರೆ. ಅವರ ಮೇಲೆ ಆತ್ಮನು ಇಳಿದು ಬರುತ್ತಾನೆ ಮತ್ತು ಅವರ ಮೇಲೆ ಆತ್ಮನು ಸುರಿಸಲ್ಪಡುತ್ತಾನೆ. ಒಬ್ಬ ವಿಶ್ವಾಸಿಯು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ ಏನೆಲ್ಲಾ ಜರಗುತ್ತದೆ ಎಂಬುದಕ್ಕೆ ಇಂತಹ ಎಲ್ಲಾ ಅಭಿವ್ಯಕ್ತತೆಗಳು ಮಾನ್ಯವಾದುದಾಗಿದೆ.

## ಒಂದೇ ದೀಕ್ಷಾಸ್ನಾನ, ಅನೇಕ ತುಂಬಿಸುವಿಕೆಗಳು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಂತಹ ಅದೇ ವಿಶ್ವಾಸಿಗಳು ಪವಿತ್ರಾತ್ಮದಲ್ಲಿ ಭರಿತರಾಗಿದ್ದರು ಅಥವಾ ಆತ್ಮದೊಡನೆ ಪದೇ ಪದೇ ತುಂಬಿಸಲ್ಪಟ್ಟರು ಎಂಬುದರ ದಾಖಲೆಯನ್ನು ಅಪೊಸ್ತಲರ ಕೃತ್ಯಗಳು ಪುಸ್ತಕದುದ್ದಕ್ಕೂ ನಾವು ಗಮನಿಸುತ್ತೇವೆ.

**ಅಪೊಸ್ತಲರ ಕೃತ್ಯಗಳು 4:8**
**ಪೇತ್ರನು ಪವಿತ್ರಾತ್ಮಭರಿತನಾಗಿ ಅವರಿಗೆ ಜನರ ಅಧಿಕಾರಿಗಳೇ, ಹಿರಿಯರೇ.**

**ಅಪೊಸ್ತಲರ ಕೃತ್ಯಗಳು 4:31**
**ಹೀಗೆ ಪ್ರಾರ್ಥನೆ ಮಾಡಿದ ಮೇಲೆ ಅವರು ಕೂಡಿದ್ದ ಸ್ಥಳವು ನಡುಗಿತು ಅವರೆಲ್ಲರು ಪವಿತ್ರಾತ್ಮಭರಿತರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು.**

**ಅಪೊಸ್ತಲರ ಕೃತ್ಯಗಳು 6:3**
**ಆದದರಿಂದ ಸಹೋದರರೇ ಸಂಭಾವಿತರೂ ಪವಿತ್ರಾತ್ಮಭರಿತರೂ ಜ್ಞಾನ ಸಂಪನ್ನರೂ ಆಗಿರುವ ಏಳು ಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು.**

**ಅಪೊಸ್ತಲರ ಕೃತ್ಯಗಳು 6:5**
**ಈ ಮಾತು ಸರ್ವಮಂಡಲಿಗೆ ಒಳ್ಳೆಂದೆದು ತೋಚಿತು ಅವರು ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆದ ಸ್ತೆಫನನ್ನೂ ಫಿಲಿಪ್ಪ, ಪ್ರೊಖೋರ, ನಿಕನೋರ, ತಿಮೋನ, ಪರ್ಮೇನ, ಯೆಹೂದ್ಯ ಮತಾವಲಂಬಿಯಾದ ಅಂತಿಯೋಕ್ಯದ ನಿಕೊಲಾಯ ಎಂಬವರನ್ನು ಆರಿಸಿಕೊಂಡು ಅಪೊಸ್ತಲರ ಮುಂದೆ ನಿಲ್ಲಿಸಿದರು.**

**ಅಪೊಸ್ತಲರ ಕೃತ್ಯಗಳು 7:55**
**ಆದರೆ ಅವನು ಪವಿತ್ರಾತ್ಮಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನು ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನು ಕಂಡು**

**ಅಪೊಸ್ತಲರ ಕೃತ್ಯಗಳು 11:24**
**ಅವನು ಒಳ್ಳೆಯವನೂ ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆಗಿದ್ದನು ಆಗ ಬಹುಮಂದಿ ಕರ್ತನಿಗೆ ಸೇರಿಕೊಂಡರು**

**ಅಪೊಸ್ತಲರ ಕೃತ್ಯಗಳು 13:9**
**ಆಗ ಪೌಲನೆನಿಸಿಕೊಳ್ಳುವ ಸೌಲನು ಪವಿತ್ರಾತ್ಮಭರಿತನಾಗಿ ಅವನನ್ನು ದೃಷ್ಟಿಸಿ ನೋಡಿ**

**ಅಪೊಸ್ತಲರ ಕೃತ್ಯಗಳು 13:52**
**ಶಿಷ್ಯರಾದವರು ಸಂತೋಷ ಪೂರ್ಣರೂ ಪವಿತ್ರಾತ್ಮಭರಿತರೂ ಆದರು**

ಅಪೊಸ್ತಲನಾದ ಪೌಲನು, ಆತ್ಮನ ದೀಕ್ಷಾಸ್ನಾನ ಹೊಂದಿದ (ಅಥವಾ ಆತ್ಮನಿಂದ ಭರಿತರಾದ,) ವಿಶ್ವಾಸಿಗಳಿಗೆ ಆತ್ಮನಲ್ಲಿ ನಡೆಯಬೇಕು ಮತ್ತು ಆತ್ಮನಲ್ಲಿ ಜೀವಿಸಬೇಕು ಎಂಬುದಾಗಿ ಅವನ ಪತ್ರಿಕೆಗಳಲ್ಲಿ ಸೂಚಿಸುತ್ತಾನೆ:

**ಎಫೆಸದವರಿಗೆ 5:18-21**

**[18] ಮದ್ಯಪಾನ ಮಾಡಿ ಮತ್ತರಾಗ ಬೇಡಿರಿ ಆದರಿಂದ ಪಟಿಂಗತನವು ಹುಟ್ಟುತ್ತದೆ.**
**[19] ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ**
**[20] ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ ಕ್ರಿಸ್ತನಿಗೆ ಭಯಪಡುವವರಾಗಿದ್ದು**
**[21] ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ.**

**ಗಲಾತ್ಯದವರಿಗೆ 5:16,22-25**

**[16] ನಾನು ಹೇಳುವುದೇನೆಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ.**
**[22] ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ - ಪ್ರೀತಿ, ಸಂತೋಷ, ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ**
**[23] ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವುದಿಲ್ಲ**
**[24] ಕ್ರಿಸ್ತ ಯೇಸುವಿನವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು.**
**[25] ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ**

ನಾವು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ ಆ ಒಂದು ಕ್ಷಣದಲ್ಲಿ ನಾವು ಅಭಿಷೇಕಿಸಲ್ಪಡುತ್ತೇವೆ ಮತ್ತು ತುಂಬಿಸಲ್ಪಡುತ್ತೇವೆ. ಆತ್ಮನಿಂದ ತುಂಬಲ್ಪಟ್ಟಿರುವದು, ವಿಶ್ವಾಸಿಗಳೊಳಗೆ ಪವಿತ್ರಾತ್ಮನ ಕೆಲಸಗಳು ನಾವು ಹೇಗೆ ಜೀವಿಸುತ್ತೇವೆ ಎಂಬುದರ ಮೇಲೆ ಪರಿಣಾಮ ಬೀರುತ್ತದೆ ಇದು ನಮ್ಮ ನಡೆ ನಡವಳಿಕೆಯೊಂದಿಗೆ ವ್ಯವಹರಿಸುವುದಾಗಿದೆ. ಅಭಿಷಕ್ತರಾಗಿರುವದು ಪವಿತ್ರಾತ್ಮನ ಕಾರ್ಯವಾಗಿದೆ, ಇದು ನಮ್ಮ ಸೇವೆಯನ್ನು ಸಶಕ್ತಿಕರಿಸುತ್ತದೆ, ನಮ್ಮ ಕೆಲಸದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದುವುದು ಒಂದು ತುಂಬಿಸುವಿಕೆ ಮತ್ತು ಅಭಿಷೇಕದ ಫಲಿತಾಂಶ ನೀಡುತ್ತದೆ. ದೀಕ್ಷಾಸ್ನಾನ ಎಂದರೆ ಅಭಿಷೇಕ ಹೊಂದುವುದು, ತುಂಬಿಸಲ್ಪಡುವುದಾಗಿದೆ, ಮತ್ತು ಇವೆರಡನ್ನು ''ಕ್ರಿಯಾಶೀಲತೆಯಲ್ಲಿ'' ಇಡಬೇಕೆಂದು ನಾವು ನೋಡುತ್ತೇವೆ.

## ತುಂಬಿಸಲ್ಪಟ್ಟು ಮತ್ತು ನಡೆಯುವುದು ಮತ್ತು ಆತ್ಮನಲ್ಲಿ ಜೀವಿಸುವುದು

ಮೇಲೆ ಕೊಡಲ್ಪಟ್ಟ ವಚನಗಳಲ್ಲಿ ನೋಡುವ ಪ್ರಕಾರ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಹೊಂದಿದಾಗ ನಾವು ತುಂಬಿಸಲ್ಪಟ್ಟವರಾಗಲೂ ನಾವು ಆತ್ಮಭರಿತರಾಗಿರಬೇಕು ಅಥವಾ ತುಂಬಿಸಲ್ಪಟ್ಟವರಾಗಿ ಇರುವುದು ಅಗತ್ಯವಾಗಿದೆ. ನಾವು ನಿರಂತರವಾಗಿ, ಪದೇ ಪದೇ ಮತ್ತೂ ಇದು ಯಾಕೆಂದರೆ ಶರೀರ ಮತ್ತು ಆತ್ಮದ ನಡುವಿನ ನಿರಂತರ ಹೋರಾಟವಾಗಿರುತ್ತದೆ. (ಗಲಾತ್ಯದವರಿಗೆ 5:17) ಶರೀರವು ಮೇಲುಗೈ ಸಾಧಿಸಲು ನಾನು ಅವಕಾಶಕೊಟ್ಟರೆ ಆಗ ನಾನು ಆತ್ಮನ ''ಕಡಿಮೆ ತುಂಬಿದವನಾಗುತ್ತೇನೆ'' ಇದು ನನ್ನ ಮೇಲೆ ಆತ್ಮನ ಪ್ರಭಾವವು ಕ್ಷೀಣಿಸುತ್ತದೆ ಅಥವಾ ಆ ವ್ಯಾಪ್ತಿಗೆ ಕಡಿಮೆಯಾಗುತ್ತದೆ. ಆದರೆ ನಾನು ಆತ್ಮನಲ್ಲಿ ಪೂರ್ಣವಾಗಿರುವುದಾದರೆ, ಶರೀರವು ಅಧೀನದಲ್ಲಿರುವುದಾಗಿರುತ್ತದೆ. ನಾವು ಆತ್ಮದೊಡನೆ ತುಂಬಿಸಲ್ಪಟ್ಟವರಾಗಿ ಜೀವಿಸುವುದಾದರೆ ಅಪೊಸ್ತಲನಾದ ಪೌಲನು ''ಆತ್ಮನಲ್ಲಿ ನಡೆಯಿರಿ'' (ಗಲಾತ್ಯದವರಿಗೆ 5:16) ಅಥವಾ ''ಆತ್ಮನಲ್ಲಿ ಜೀವಿಸಿರಿ'' (ಗಲಾತ್ಯದವರಿಗೆ 5:25). ಎಂಬುದಾಗಿ ನಮಗೆ ಬೋಧಿಸಿದ್ದನ್ನು ನಾವು ಮಾಡುವವರಾಗಿರುತ್ತೇವೆ. ಆತ್ಮಭರಿತನಾದ ವ್ಯಕ್ತಿಯು ಜ್ಞಾನ, ನಂಬಿಕೆ, ಕೃತಜ್ಞತೆಯಿಂದ ನಡೆಯುತ್ತಾನೆ, ಕರ್ತನಿಗಾಗಿ ಹಾಡುತ್ತಾನೆ, ಸಮರ್ಪಣೆಯಲ್ಲಿ ನಡೆಯುತ್ತಾನೆ, ಆತ್ಮನ ಫಲಗಳನ್ನು ತೋರ್ಪಡಿಸುತ್ತಾನೆ. (ಗಲಾತ್ಯದವರಿಗೆ 5:22,23) ಮತ್ತು ಶರೀರದ ಪಾಪಯುತ ದುರಾಶೆಗಳಿಂದ ಹೊರಬರುತ್ತಾನೆ (ಗಲಾತ್ಯದವರಿಗೆ 5:16,24). ಆತ್ಮಭರಿತರಾಗಲೂ ನಮ್ಮ ಹೃದಯಗಳನ್ನು ಶುದ್ಧವಾಗಿ ಮತ್ತು ಸ್ವತಂತ್ರ್ಯವಾಗಿ ಇಟ್ಟುಕೊಳ್ಳಬೇಕು. ಪಾಪಗಳನ್ನು ಅರಿಕೆ ಮಾಡಿರಿ ಮತ್ತು 1 ಯೋಹಾನ 1:7,9ರ ಪ್ರಕಾರವಾಗಿ ತಕ್ಷಣವೇ ಆತನ ಶುದ್ಧೀಕರಣ ಹೊಂದಿಕೊಳ್ಳಿರಿ, ನೀವು ಮನನೊಂದವರಾದ ತಕ್ಷಣವೇ ಕ್ಷಮಾಪಣೆಯನ್ನು ಬಿಡುಗಡೆ ಮಾಡಿರಿ. ನಿಮ್ಮನ್ನು ತುಂಬಿಸಲು ಆತ್ಮನನ್ನು ಆಹ್ವಾನಿಸಿರಿ. ಇದು ಆತ್ಮದೊಡನೆ ತುಂಬಿಸಲ್ಪಟ್ಟು, ಆತ್ಮನಲ್ಲಿ ಜೀವಿಸುವರಾಗಿ ಮತ್ತು ಆತ್ಮದಲ್ಲಿ ನಡೆಯುವುದರಲ್ಲಿ ಕ್ರೀಯಾಶೀಲರಾಗಿರುವಂತೆ ಮಾಡಲು ಸಹಾಯ ಮಾಡುತ್ತದೆ.

## ಅಭಿಷೇಕ ಹೊಂದಿದ

ನಾವು ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿದಾಗ, ಆತ್ಮದಿಂದ ನಾವು ಅಭಿಷೇಕ ಹೊಂದಿಕೊಂಡವರಾಗುತ್ತೇವೆ. ಅಭಿಷೇಕಿಸಲ್ಪಟ್ಟಿರುವುದೇಂದರೆ, ನಮ್ಮ ಮೂಲಕವಾಗಿ ದೇವರು ಮಾಡಲಿಚ್ಛಿಸುವಂತಹವುಗಳಿಗೆ ಅಧಿಕಾರ ಕೊಡಲೂ ಆತ್ಮನನ್ನು ನಮ್ಮ ಮೇಲೆ ಹೊಂದಿಕೊಳ್ಳುವುದಾಗಿದೆ (ಲೂಕ 4:17–19;

ಅಪೊಸ್ತಲರ ಕೃತ್ಯಗಳು 10:38). ಕ್ರಿಸ್ತನಲ್ಲಿ ಸ್ಥಾನಿಕವಾಗಿ, ಎಲ್ಲಾ ಸಮಯದಲ್ಲಿ ನಾವು ಅಭಿಷೇಕಿಸಲ್ಪಟ್ಟಿದ್ದೇವೆ. (2 ಕೊರಿಂಥದವರಿಗೆ 1:21). ಆದಾಗ್ಯೂ ನಾವು ಎಲ್ಲಾ ಸಮಯದಲ್ಲೂ ಕೆಲಸಗಳನ್ನು ಮಾಡದಿರುವುದರಿಂದ ಅಭಿಷೇಕವು ಎಲ್ಲಾ ಸಮಯದಲ್ಲಿ ಕ್ರಿಯಾಶಾಲಿಯಾಗಿರುವುದಿಲ್ಲ. ಪವಿತ್ರಾತ್ಮನು ನಮ್ಮ ಮೇಲೆ ಚಲಿಸುವಾಗೆಲ್ಲಾ ಆತನು ಬಯಸುವ ಕಾರ್ಯಗಳನ್ನು (ನೀವು ಮಾಡಬೇಕೆಂದು ದೇವರು ಬಯಸುವ ಎಲ್ಲವುಗಳಿಗೆ ಒಂದು ಅಭಿಷೇಕವಿದೆ) ಮಾಡುವದಕ್ಕೆ ತನ್ನ ಬಲವನ್ನು ಬಿಡುಗಡೆಗೊಳಿಸುತ್ತಾನೆ. ಆ ಸಮಯದಲ್ಲಿ ನಾವು ಅಭಿಷೇಕಿಸಲ್ಪಟ್ಟಿದ್ದೇವೆ ಎಂದು ಹೇಳುತ್ತೇವೆ.(ದೇವರಿಗಾಗಿ ನೀವು ಮಾಡಬೇಕಾದಂತ ಎಲ್ಲದವುಗಳ ಮೇಲೆ ಅಭಿಷೇಕವಿದೆ) ಮಾಡಲೂ ಚಲಿಸುತ್ತಾನೆ. ಸಮಯದಲ್ಲಿ ನಾವು ಅಭಿಷೇಕಿಸಲ್ಪಟ್ಟಿದ್ದೇವೆ ಎಂಬುದಾಗಿ ನಾವು ಹೇಳುತ್ತೇವೆ. (ಅಭಿಷೇಕವು ''ಕ್ರಿಯಾಶೀಲವಾಗಿರುತ್ತದೆ'') **ಅಭಿಷೇಕವು ಒಬ್ಬ ವಿಶ್ವಾಸಿಯ ಮೂಲಕವಾಗಿ ತೋರ್ಪಡಿಸುವಂತ ಆತ್ಮನ ಬಲವಾಗಿದೆ.** ಪವಿತ್ರಾತ್ಮನು ತಾನೇ ಇದನ್ನು ಆರಂಭಿಸುವಂತಹ ಸಮಯಗಳು ಇವೆ. ಆತನು ನಮ್ಮ ಮೇಲೆ ಚಲಿಸುತ್ತಾನೆ ಆಮೇಲೆ ನಾವು ಕಾರ್ಯಗಳನ್ನು ಮಾಡಲು ಪ್ರಾರಂಭಿಸುತ್ತೇವೆ. ನಾವು ಮೊದಲು ಕೆಲಸವನ್ನು ಪ್ರಾರಂಭಿಸುತ್ತೇವೆ. ಕೆಲವೊಂದು ಸಮಯದಲ್ಲಿ ನಾವು ಕೆಲಸವನ್ನು ಪ್ರಾರಂಭಿಸುತ್ತೇವೆ ಮತ್ತು ನಂತರ ಮತ್ತು ಅಭಿಷೇಕ ಹರಿಯಲು ಅಥವಾ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತದೆ. ಜನರ ಸೇವೆ ಮಾಡಲಿಕ್ಕೆ ಪವಿತ್ರಾತ್ಮನ ವರಗಳು ಕಾಲುವೆಗಳ (ಅಥವಾ ಉಪಕರಣಗಳು) ಮೂಲಕವಾಗಿ ಪವಿತ್ರಾತ್ಮನ ಅಭಿಷೇಕವು (ಬಲವು) ಪ್ರದರ್ಶಿಸಲ್ಪಡುತ್ತದೆ. ವಿವಿಧ ಬಗೆಯ ಅಭಿಷೇಕದ ಹಂತಗಳಿವೆ. ಇತರೆ ಸಮಯಗಳಿಗಿಂತ ''ಅಧಿಕವಾಗಿ ಅಭಿಷೇಕಿಸಲ್ಪಟ್ಟಂತಹ'' ಸಮಯಗಳು ಇವೆ. **ಬಲದ ಹಂತವು ಆ ಕ್ಷಣದಲ್ಲಿ ಕಾರ್ಯರೂಪದಲ್ಲಿರುವ ಮತ್ತು ಉಪಸ್ಥಿತವಿರುವ ಅಭಿಷೇಕದ ಅನುಪಾತದಲ್ಲಿ ತೋರ್ಪಡಿಸಲ್ಪಟ್ಟಿದೆ.**

ನಾವು ನಿರಂತರವಾಗಿ ಆತ್ಮಭರಿತರಾಗಿರಬೇಕು. ಅಲ್ಲದೆ ನಾವು ಸೇವೆ ಮಾಡುವಂತಹ ಎಲ್ಲಾ ಸಮಯದಲ್ಲಿ (ದೇವರು ಕರೆದಂತಹ ಕಾರ್ಯಗಳನ್ನು ನಾವು ಮಾಡಲೂ) ಅಭಿಷೇಕದ ಅಡಿಯಲ್ಲಿ ನಾವು ಚಲಿಸುವವರಾಗಿರಬೇಕು. ಆದುದರಿಂದ ಈ ಒಂದು ಅರ್ಥದಲ್ಲಿ ಪವಿತ್ರಾತ್ಮನಲ್ಲಿನ ದೀಕ್ಷಾಸ್ನಾನವು ಪ್ರಾರಂಭಿಕ ಮತ್ತು ಪುನರಾವರ್ತನೀಯವಾಗಿರುತ್ತದೆ. ನಾವು ಪವಿತ್ರಾತ್ಮನಲ್ಲಿ ಒಂದೇ ಸಾರಿ ದೀಕ್ಷಾಸ್ನಾನ ಹೊಂದಿಕೊಳ್ಳುತ್ತೇವೆ, ಆದರೆ ಪದೇ ಪದೇ ಮತ್ತೆ ಮತ್ತೆ ಲೆಕ್ಕವಿಲ್ಲದಷ್ಟು ಸಮಯ ತುಂಬಿಸಲ್ಪಡುತ್ತೇವೆ ಮತ್ತು ಅಭಿಷೇಕಿಸಲ್ಪಡುತ್ತೇವೆ.

## ನಮ್ಮ ಮೇಲಿರುವ ಅಭಿಷೇಕ ಮತ್ತು ನಮ್ಮೊಳಗಿರುವ ಅಭಿಷೇಕ

''ಮೇಲಿರುವ ಅಭಿಷೇಕ'' ಮತ್ತು ''ಒಳಗಿರುವ ಅಭಿಷೇಕ'' ಇದರಲ್ಲಿ ನಾವು ಗೊಂದಲಕ್ಕೊಳಗಾಗಬಾರದು ಎಂಬುದನ್ನು ಗಮನಿಸಿ. ಮೇಲಿರುವಂತಹ ಅಭಿಷೇಕವು, ಸೇವೆಗಾಗಿ ನಮಗೆ ಅಧಿಕಾರಕೊಡುವಂತಹ ಆತ್ಮನು ನಮ್ಮೊಳಗೆ ಇರುವುದಾಗಿದೆ. ಒಳಗಿರುವಂತಹ ಅಭಿಷೇಕವು, ಒಳಗಿರುವಂತ ಅಭಿಷೇಕವು ನಮ್ಮೊಳಗಿರುವ ಆತ್ಮನು ನಮ್ಮಲ್ಲಿ ತನ್ನ ವಾಸಿಸುವ ಕಾರ್ಯವನ್ನು ಸಾಗಿಸಿಕೊಂಡು ಹೋಗುವದಾಗಿದೆ ಮತ್ತು ಕ್ರಿಸ್ತನ ಸ್ವಾರೂಪ್ಯಕ್ಕೆ ನಮ್ಮನ್ನು ರೂಪಾಂತರಗೊಳಿಸುವದಾಗಿದೆ. ಆದ್ದರಿಂದ ವಿಶ್ವಾಸಿಗಳಲ್ಲಿ ನೆಲೆಗೊಂಡಿರುವಂತಹ (ಒಳಗಿರುವ ಅಭಿಷೇಕ) ಆತ್ಮನ ಕಾರ್ಯವನ್ನು 1 ಯೋಹಾನ 2:20,27 ಇದು ಉಲ್ಲೇಖಿಸುತ್ತದೆ.

**1 ಯೋಹಾನನು 2:20,27**

**[20] ನೀವು ಪವಿತ್ರನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದು ಎಲ್ಲವೂ ತಿಳಿದವರಾಗಿದ್ದೀರಿ**

**[27] ಆದರೆ ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವದು ಅವಶ್ಯವಿಲ್ಲ ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದಾಗಿದ್ದು ಸತ್ಯವಾಗಿದೆ ಸುಳ್ಳಲ್ಲ. ಅದು ಉಪದೇಶ ಮಾಡಿದ ಪ್ರಕಾರ ಆತನಲ್ಲಿ ನೆಲೆಗೊಂಡಿರ್ರಿ.**

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ 5000 ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು, ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ''*** ಎಂದು ಹೇಳುತ್ತದೆ **(ರೋಮಾಪುರದವರಿಗೆ 6:23)**. ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ

ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ...''* (ಅಪೊಸ್ತಲರ ಕೃತ್ಯಗಳು 10:43).**

***''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದು''* (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

*ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.*

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೇನ್*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸುಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವುದರಿಂದ ಸ್ಥಳೀಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ದತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅದ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Speaking in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು ಪಿ.ಡಿ.ಎಫ್ ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ.ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ್ ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವುದಾಗಿದೆ.

- **ಹದಿಹರೆಯದವರು**
- **ವೈಯಕ್ತಿಕ ಹೊಂದಾಣಿಕೆಗಳು**
- **ಸಂಬಂಧಿತ ಸವಾಲುಗಳು**
- **ಶೈಕ್ಷಣಿಕ ಕಡಿಮೆ ಸಾಧನೆ**
- **ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳು**
- **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
- **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
- **ವರ್ತನೆಯ ಅಸ್ತವ್ಯಸ್ತತೆಗಳು**
- **ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
- **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
- **ಒತ್ತಡ / ಆಘಾತ**
- **ಮಧುಪಾನ/ ಮಾದಕ ವಸ್ತು ದುರುಪಯೋಗ**
- **ಆತ್ಮೀಕ ಸಮಸ್ಯೆಗಳು**
- **ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ್ ಸೇವೆಗಳು ಕೈಗೆಟುಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ**: +91-80-25452617 ಅಥವಾ ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೇಲ್: counselor@chrysalislife.org**

ಕ್ರಿಸಾಲಿಸ್ ಕೌನ್ಸೆಲಿಂಗ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್‌ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ ''ಆಲ್ ಪೀಪಲ್ಸ್ ಸಭೆ'' ಬೆಂಗಳೂರು ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru-560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:* **apcwo.org/give.**

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

**apcbiblecollege.org**

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು—ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ–ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.

- ಒಂದು-ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (C.Th.)
- ಎರಡು-ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (Dip.Th.)
- ಮೂರು-ವರ್ಷದ ಬ್ಯಾಚುಲರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9ರಿಂದ ಮದ್ಯಾಹ್ನ 12ರವರೆಗೆ ಜರುಗುತ್ತದೆ, ಭಾರತದ ಕಾಲಾಮಾನ (ಸಂಘಟಿತ ಸಾರ್ವತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಛಿಕ ವಿಷಯಗಳನ್ನು ನೀಡುತ್ತೇವೆ.

- **ಆನ್-ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವೈಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಆನ್ ಲೈನ್:** ಆನ್ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವುದು.
- **ಇ-ಕಲಿಕೆ:** ಆನ್ಲೈನ್ ಪೋರ್ಟಲ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವುದು.

**ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಲು** ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿರಿ.

ಕರ್ತನಾದ ಯೇಸುವು ನಿಮಗೆ ಕೊಡಲು ಬಂದಂತಹ ಪವಿತ್ರಾತ್ಮದಲ್ಲಿನ ದೀಕ್ಷಾಸ್ನಾನದ ಕುರಿತು ಅನೇಕ ವಿಶ್ವಾಸಿಗಳಿಗೆ ತಿಳಿದಿಲ್ಲ. ಕ್ರಮಬದ್ಧವಾದ ಬೋಧನೆಯ ಕೊರತೆಯಿಂದಾಗಿ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವನ್ನು ಶಬ್ಧದೊಡನೆ ತುಂಬಲ್ಪಟ್ಟ ಒಂದು ಸೇರುವಿಕೆ, ಕೂಗಾಟ, ಕಿರುಚುವುದು ಮತ್ತು ಇತರೆ ವಿಚಿತ್ರ ಅಭಿವ್ಯಕ್ತತೆಗಳೊಡನೆ ಕೆಲವು ವಿಶ್ವಾಸಿಗಳು ಗೊಂದಲಕ್ಕೊಳಗಾಗಿದ್ದಾರೆ. ಅವರು ಪವಿತ್ರಾತ್ಮದ ಬಲ ಮತ್ತು ಉದ್ದೇಶವನ್ನು ಅರ್ಥಮಾಡಿಕೊಳ್ಳುವುದಿಲ್ಲ. ದೇವರ ವಾಕ್ಯದಲ್ಲಿ ಈ ಸರಳವಾದ ಅಧ್ಯಯನವು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಅಂದರೇನು ಎಂಬುದನ್ನು ನಾವು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಉದ್ಧೇಶ ಹೊಂದಿದೆ. ಮತ್ತು ಆಮೇಲೆ ನಮಗೋಸ್ಕರವಾಗಿ ಇದನ್ನು ಪಡೆದುಕೊಳ್ಳಲು ಮುನ್ನಡೆಸುತ್ತದೆ. ಪವಿತ್ರಾತ್ಮನ ಬಲವನ್ನು ಪ್ರದರ್ಶಿಸಲು ಒಂದು ಅದ್ಭುತವಾದ ಪ್ರಯಾಣದ ಪ್ರಾರಂಭವು ಇದಾಗಿದೆ. ಪ್ರತಿಯೊಬ್ಬ ವಿಶ್ವಾಸಿಯು ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ ಪಡೆಯಬಹುದು ಮತ್ತು ಆಮೇಲೆ ಆತ್ಮನ ಎಲ್ಲಾ ವರಗಳಲ್ಲಿ ಸಂಪರ್ಕದಾರಿಯಾಗಿ ಪ್ರಯಾಣಿಸಬಹುದು ಆದ್ದರಿಂದ ದೇವರ ಬಲವು ಪ್ರಕಟಗೊಳ್ಳುತ್ತದೆ ಮತ್ತು ಯೇಸುವಿಗೆ ಮಹಿಮೆಯುಂಟಾಗುತ್ತದೆ!

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org